ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ

ಸಂಪುಟ 6 ಸಂಚಿಕೆ 35

೨೯ ಜೂನ್ ೧೯೫೮

★

ಪುಟ ೧೦ ಬೆಲೆ: ೧೩ ನಯೇ ಪೈಸೆ

★

ಕೇರಳದಲ್ಲಿ ಸರಕಾರಿ ನೌಕರರ ಸಂಬಳದಲ್ಲಿ ಹೆಚ್ಚಳ

ಅಧಿಕಾರಿಗಳ ಸಂಬಳದಲ್ಲಿ ಯುಕ್ತಾಯುಕ್ತ ಮಿತಿ

ರಾಜ್ಯದ ಆಡಳಿತ ವ್ಯವಸ್ಥೆಯಲ್ಲೂ ಜನಜೀವನದಲ್ಲೂ ಅನೇಕ ಮೂಲಭೂತ ಮತ್ತು ಪ್ರಜಾಸತ್ತಾತ್ಮಕ ಸುಧಾರಣೆಗಳನ್ನು ತಂದಿರುವ ಕೇರಳದ ಕಮ್ಯೂನಿಸ್ಟ್ ಸರಕಾರದ ಸರ್ಕಾರಿ ನೌಕರರ ಸಂಬಳಸಾರಿಗೆ ವಿಷಯದಲ್ಲೂ ಈಗೊಂದು ಮಹತ್ವದ ಹೆಜ್ಜೆಯನ್ನಿಟ್ಟಿದೆ. ಆದರಲ್ಲಡಕವಾಗಿರುವ ಧೋರಣೆಯು ಇತರ ಸರಕಾರಗಳಿಗೊಂದು ಮೇಲ್ಪಂಕ್ತಿಯಾಗಿದೆ.

ಈ ತೀರ್ಮಾನದ ಮುಖ್ಯ ಅಂಶಗಳಿವು:

○ ಪ್ರತಿಯೊಬ್ಬ ನೌಕರನಿಗೂ ಕನಿಷ್ಠ ಸಂಬಳ ತಿಂಗಳಿಗೆ ರೂ. 30, ತುಟ್ಟಿ ಭತ್ತೆ ರೂ. 25 ಮತ್ತು ವಿಶೇಷ ತುಟ್ಟಿ ಭತ್ತೆ ರೂ. 12. ಅಂದರೆ ಯಾರಿಗೂ ರೂ. 65 ಕ್ಕಿಂತ ಕಡಿಮೆ ಇಲ್ಲ.

○ ವರಿಷ್ಠ ಅಧಿಕಾರಿಗಳಿಗೆ ಅತ್ಯಧಿಕ ಸಂಬಳ ರೂ. 1,000 ಮಾತ್ರ. ವಿಶೇಷ ತಾಂತ್ರಿಕ ಪ್ರಾವೀಣ್ಯತೆ ಪಡೆದ ಅಧಿಕಾರಿಗಳಿಗಷ್ಟೇ ಈ ಪರಮಾವಧಿಗಿಂತ ಸ್ವಲ್ಪ ಹೆಚ್ಚು ಕೊಡಲು ಅವಕಾಶವಿದೆ. ಅವರಿಗೆ 1,200 ರೂ. ವರೆಗೆ ಕೊಡುತ್ತಾರೆ.

○ ಪೋಲಿಸ್, ಫಾರೆಸ್ಟ್ ಮತ್ತು ಎಕ್ಸೈಸ್ ಗಾರ್ಡ್ಸ್ ಮುಂತಾದವರ ಕನಿಷ್ಠ ಮತ್ತು ಪರಮಾವಧಿ ಸಂಬಳದಲ್ಲಿ ರೂ. 5 ಹೆಚ್ಚಿಸಲಾಗಿದೆ.

○ ನೌಕರರಿಗೆ ಔಷಧೋಪಚಾರ, ಶಿಕ್ಷಣ ಸೌಲಭ್ಯ ಜೀವ ವಿಮಾ ಮುಂತಾದ ಸವಲತ್ತುಗಳ ಬಗ್ಗೆ ಸಂಬಳ ಸಮಿತಿಯು ಮಾಡಿದ ಶಿಫಾರ್ಸುಗಳನ್ನು ಸರಕಾರ ವಿಚಾರ ಮಾಡಿ 2 ತಿಂಗಳೊಳಗೆ ಕ್ರಮ ತೆಗೆದುಕೊಳ್ಳುವುದು.

○ ಗಜೆಟ್ ಅಧಿಕಾರಿಗಳ ಸಂಬಳದಲ್ಲೂ ಯುಕ್ತಾಯುಕ್ತತೆಯನ್ನು ಪರಿಗಣಿಸಿ ಸಂಬಳ ಹೆಚ್ಚಿಸಲಾಗಿದೆ.

ಇದರ ಪರಿಣಾಮವಾಗಿ ಒಂದು ಲಕ್ಷಕ್ಕೂ ಮೇಲ್ಪಟ್ಟ ರಾಜ್ಯದ ಸರಕಾರೀ ನೌಕರರಿಗೆ ವರ್ಷಕ್ಕೆ ಸುಮಾರು 142 ಲಕ್ಷ ರೂಪಾಯಿಯಷ್ಟು ಹೆಚ್ಚಿನ ಸಂಬಳ ಮತ್ತು ತುಟ್ಟಿ ಭತ್ತೆಯ ರೂಪದಲ್ಲಿ ದೊರೆಯಲಿದೆ.

ರಾಜ್ಯದ ನೌಕರರ ಸಂಬಳವನ್ನು ಪುನರ್ವಿಮರ್ಶೆ ಮಾಡಲು ಕೇರಳ ಸರಕಾರ 8 ತಿಂಗಳ ಹಿಂದೆ ಮಾಜಿ ಹೈಕೋರ್ಟು ನ್ಯಾಯಾಧೀಶರಾದ ಶ್ರೀ ಆರ್. ಶಂಕರನಾರಾಯಣರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿತ್ತು. ಆ ಸಮಿತಿಯು ಏಪ್ರಿಲ್ 26ರಂದು ತನ್ನ ವರದಿಯನ್ನು ಸರಕಾರಕ್ಕೆ ಒಪ್ಪಿಸಿತು. ಸರಕಾರ ವಿಳಂಬ ಮಾಡದೆ ಕೂಡಲೇ ಅದರ ಮುಖ್ಯ ಅಂಶಗಳನ್ನು ಜಾರಿಗೆ ತರಲು ನಿರ್ಧರಿಸಿ ಈ ಕ್ರಮಗಳನ್ನು ತೆಗೆದುಕೊಂಡಿದೆ. ಎರಡು ತಿಂಗಳೊಳಗೆನೇ ಕೇರಳ ಸರಕಾರ ಈ ಕ್ರಮ ತೆಗೆದುಕೊಂಡಿರುವುದು ಗಮನಾರ್ಹವಾಗಿದೆ. ಕೇಂದ್ರ ಸರಕಾರ ಥಕ್ಕೆ ಕೆಲಸಗಾರರ ಬಗ್ಗೆ ವರದಿ ಮಾಡಲು ಚೌಧರಿ ಸಮಿತಿಯನ್ನು ನೇಮಿಸಿ ಅದರ ವರದಿಯು ಸರಕಾರಕ್ಕೆ ಒಂಬತ್ತು ತಿಂಗಳ ಹಿಂದೆ ಒಪ್ಪಿಸಲ್ಪಟ್ಟಿದ್ದರೂ ಅದರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಳ್ಳದಿದ್ದು ಅದರ ಪರಿಣಾಮವಾಗಿ ಈಗ ಸುಮಾರು ಒಂದು ಲಕ್ಷ ಕೆಲಸಗಾರರು ಮುಷ್ಕರ ಹೂಡುವ ಪರಿಸ್ಥಿತಿ ಬಂದೊದಗಿದ್ದನ್ನು ನೋಡಿದರೆ ಕಮ್ಯೂನಿಸ್ಟ್ ಸರಕಾರಕ್ಕೂ, ಕಾಂಗ್ರೆಸ್ ಆಡಳಿತೆಗೂ ಇರುವ ವ್ಯತ್ಯಾಸ ಎದ್ದು ಕಾಣುವುದು. ಕಾಂಗ್ರೆಸ್ ಆಡಳಿತೆಯಲ್ಲಿ ಎಷ್ಟೋ ವರದಿಗಳು ಕಸದ ಬುಟ್ಟಿಗೆ ಬೀಳುವುದು ಅಥವಾ ಗೆದ್ದಲು ಹಿಡಿದುಹೋಗುವ ಸ್ಥಿತಿಯಲ್ಲಿರುವುದು ಜನತೆಯ ಅನುಭವವಾಗಿದೆ. ಈ ವಿಷಯದಲ್ಲಿ ಕಮ್ಯೂನಿಸ್ಟ್ ಸರಕಾರ ಒಂದು ಹೊಸ ಪರಂಪರೆಯನ್ನೇ ಸ್ಥಾಪಿಸಿದೆ.

ಕೇರಳದ ಕಮ್ಯೂನಿಸ್ಟ್ ಸರಕಾರ ತಮ್ಮ ನೌಕರರಿಗೆ ಸಂಬಳ ಹೆಚ್ಚಿಸಬೇಕೆಂಬುದನ್ನು ಮನಗಂಡು ತಾನೇ ಸಮಿತಿಯನ್ನು ರಚಿಸಲು ಮುಂದೆ ಬಂತು. ಆದರೆ ಇತರ ಪ್ರಾಂತಗಳಲ್ಲಿ ನೌಕರರು ಎಷ್ಟು ಒತ್ತಾಯಪಡಿಸುತ್ತಿದ್ದರೂ ಕಾಂಗ್ರೆಸ್ ಮಂತ್ರಿಮಂಡಲಗಳು ಹಣವಿಲ್ಲವೆಂಬ ನೆಪ ಹೂಡಿ ಯೋಗ್ಯ ಕ್ರಮ ತೆಗೆದುಕೊಳ್ಳಲು ನಿರಾಕರಿಸುತ್ತವೆ. ಕೇಂದ್ರ ಸರಕಾರಿ ನೌಕರರು ಕಳೆದ ಆಗಸ್ಟ್ ತಿಂಗಳಲ್ಲಿ ಪೇ ಕಮಿಷನ್ ರಚನೆಗಾಗಿ ಮುಷ್ಕರದ ಬೆದರಿಕೆಯನ್ನು ಸಹ ಹಾಕಬೇಕಾಯಿತು. ಆದರೆ ಕಮ್ಯೂನಿಸ್ಟ್ ಸರಕಾರ ಬಡವರ ಕಷ್ಟವನ್ನು ಅರಿತಿರುವುದರಿಂದ ತಾನಾಗಿಯೇ ಇದರ ಬಗ್ಗೆ ಸಮಿತಿ ರಚಿಸಿದ್ದಲ್ಲದೆ ಸಂಬಳ ಸಾರಿಗೆಯ ಪುನರ್ವಿಮರ್ಶೆಮಾಡಿ ಜಾರಿಗೆ ತಂದಿದೆ. "ಸರಕಾರೀ ನೌಕರರ ಸಂಬಳ ಸಾರಿಗೆಗಳನ್ನು ಹೆಚ್ಚಿಸಬೇಕೆಂಬ ಅಗತ್ಯವನ್ನು ಮನಗಂಡಿರುವ ಇತರ ರಾಜ್ಯಗಳನ್ನು ಮೀನಮೇಷ ಎಣಿಸುತ್ತಿರುವ ಸಮಯದಲ್ಲಿಯೇ ಕೇರಳದ ಕಮ್ಯೂನಿಸ್ಟ್ ಸರಕಾರ ಈ ನಿಟ್ಟಿನಲ್ಲಿ ಗಮನಾರ್ಹವಾದ ಹೆಜ್ಜೆಯೊಂದನ್ನಿಟ್ಟು ತನ್ನ ನೌಕರರ ಕೃತಜ್ಞತೆಯನ್ನು ಗಳಿಸಿಕೊಂಡಿದೆ" ಎಂದು ಪ್ರಜಾವಾಣಿ ಪತ್ರಿಕೆಯು ವ್ಯಕ್ತಪಡಿಸಿದ ಅಭಿಪ್ರಾಯವನ್ನು ಎಲ್ಲರೂ ಒಪ್ಪುವುದು ಖಂಡಿತ.

ಕೇರಳದ ನೂತನ ಸಂಬಳ ಸಾರಿಗೆ ವೈಶಿಷ್ಟ್ಯವೆಂದರೆ ಉನ್ನತ ಮಟ್ಟದ ಅಧಿಕಾರಿಗಳ ಸಂಬಳವನ್ನು ಕೆಳಗಿಳಿಸಿರುವುದು. ನಮ್ಮ ಬಡದೇಶದಲ್ಲಿ ಉಚ್ಚಮಟ್ಟದ ಅಧಿಕಾರಿಗಳಿಗೆ ಕೊಡುತ್ತಿರುವ ಸಂಬಳ ದೊಡ್ಡ ಹೊರೆಯಾಗಿ ನಿಂತಿವೆ. ಕೆಳದರ್ಜೆಯ ನೌಕರರಿಗೆ ತೀರಾ ಕಡಿಮೆ ಸಂಬಳವೂ ದೊಡ್ಡ ಅಧಿಕಾರಿಗಳಿಗೆ ಮಿತಿಮೀರಿದ ಸಂಬಳವೂ ಈಗ ಇರುವುದರಿಂದ ಅಶಾಂತಿಗೆಡೆಯಾಗಿ

(ಕೊನೇ ಪುಟ ನೋಡಿ)

ಭಾರತದಲ್ಲಿ —

ಕಮ್ಯೂನಿಸಂ ಯಶಸ್ವಿಯಾಗುವುದು ಖಂಡಿತ

"ಭಾರತದಲ್ಲಿ ಕಮ್ಯೂನಿಸಂ ಯಶಸ್ವಿಯಾಗುತ್ತದೆಯೆನ್ನುವದರಲ್ಲಿ ಕಮ್ಯೂನಿಸ್ಟರಿಗೆ ಕೊಂಚವೂ ಸಂದೇಹವೇ ಇಲ್ಲ".

ಎಂಬುದಾಗಿ ಕೇರಳದಲ್ಲಿ ಕಮ್ಯೂನಿಸ್ಟ್ ನಾಯಕತ್ವದಲ್ಲಿ ಸ್ಥಾಪಿತವಾಗಿರುವ ಸರಕಾರದ ಮುಖ್ಯಮಂತ್ರಿ ಶ್ರೀ ಇ. ಎಂ. ಎಸ್. ನಂಬೂದಿರಿಪಾದ್ ಅವರು ಮದರಾಸಿನಲ್ಲಿ ಮಾತನಾಡುತ್ತಾ ಘೋಷಿಸಿದರು.

ದೇಶದ ಐಕ್ಯತೆಯನ್ನೂ, ಅಭಿವೃದ್ಧಿಯನ್ನೂ ಸಾಧಿಸಲು ಶ್ರೀ ಇ. ಎಂ. ಎಸ್.ರವರು "ದ್ವಿತೀಯ ಪಂಚವಾರ್ಷಿಕ ಯೋಜನೆಯನ್ನು ಬುಡಮೇಲು ಮಾಡುವ ಶಕ್ತಿಯ ಮೇಲೆ ವಿಜಯ ಸಾಧಿಸಲು ರಾಷ್ಟ್ರೀಯ ಐಕ್ಯತೆ ಅತ್ಯಗತ್ಯವಾಗಿದೆ. **ಯೋಜನೆಯನ್ನು ಉಳಿಸಿರಿ, ಬಡವರನ್ನು ರಕ್ಷಿಸಿರಿ** ಎಂಬುದು ನಮ್ಮ ಘೋಷಣೆಯಾಗಬೇಕು. ಪರಿಸ್ಥಿತಿ ರಾಷ್ಟ್ರೀಯ ಐಕ್ಯತೆಗೆ ಆಹ್ವಾನವೀಯುತ್ತಿದೆ. ಕಮ್ಯೂನಿಸ್ಟರಿಗೆ ರಾಷ್ಟ್ರೀಯ ಐಕ್ಯತೆ ಬೇಕೆನ್ನುವದರಲ್ಲಿ ಸಂದೇಹವೇ ಇಲ್ಲ. ಆದರೆ ಕಮ್ಯೂನಿಸ್ಟ್ ಪಕ್ಷಕ್ಕೆ ಕಾಂಗ್ರೆಸ್ಸಿದಿರಾಗಿ ಎಲ್ಲಾ ಎಡಪಕ್ಷಗಳ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆ ಬೇಕಾಗಿದೆ. ಆದರೆ ಇದರರ್ಥ ದೇಶವನ್ನು ಕಾಂಗ್ರೆಸ್ ಮತ್ತು ಕಾಂಗೆಸ್ ವಿರೋಧಿ ಎಂದು ವಿಭಜಿಸುವದು ಎಂದಲ್ಲ. ನಾವು ಕಾಂಗ್ರೆಸ್ ವಿರೋಧಿಗಳಲ್ಲ, ಆದರೆ ಅದರ ಜನವಿರೋಧಿ ನೀತಿಯು ಅಂದರೆ ಶ್ರೀಮಂತರಿಗೆ ತೆರಿಗೆ ಹಾಕದೆ ಬಡವರ ಮೇಲೆ ತೆರಿಗೆ ಹಾಕುವ ಇಂತಹ ನೀತಿಗಳ ವಿರೋಧಿಗಳು. ಕಾಂಗ್ರೆಸ್ಸಿನವರು ಕಾಂಗ್ರೆಸ್ಸೊ, ಕಮ್ಯೂನಿಸ್ಟೊ ಎಂದು ದೇಶವನ್ನು ವಿಭಜಿಸುವಂತೆ ನಾವು ವಿಭಜಿಸುವುದಿಲ್ಲ. ಇಡೀ ಕಾಂಗ್ರೆಸ್ ಪಕ್ಷವೇ ಒಂದು ಪ್ರಜಾಸತ್ತಾತ್ಮಕ ರಂಗವನ್ನು ಸೇರಿಕೊಂಡರೆ ಅದರ ಜೀವಮಾನದಲ್ಲೇ ಅದು ಅತ್ಯಂತ ಸಂತೋಷದ ದಿನವಾಗುತ್ತದೆ ಮತ್ತು ಇದೇ ದೇಶದ ಐಕ್ಯತೆಯನ್ನು ಪರಿಪೂರ್ಣವಾಗಿಸುತ್ತದೆ.

"ಮಾರ್ಕ್ಸ್‌ವಾದಕ್ಕೆ ಭಾರತದಲ್ಲಿ ಕಾಲವಿಲ್ಲ ಮತ್ತು ನೆಲೆ ಇಲ್ಲ ಎಂದು ಹೇಳುವ ಶ್ರೀಮನ್ನಾರಾಯಣರು ಅಷ್ಟೇ ಏಕೆ ಪಂಡಿತ ನೆಹ್ರೂರವರೊಡನೆ ಕೂಡ ನಾನು ಈ ವಿಚಾರವನ್ನು ಒಪ್ಪಲಾರೆ.

ಮಾರ್ಕ್ಸ್‌ವಾದ ಮತ್ತು ಲೆನಿನ್ ವಾದಗಳು ಇಡೀ ಪ್ರಪಂಚಕ್ಕೆ ಅನ್ವಯವಾಗುವ ವಿಜ್ಞಾನಗಳೆಂದು ಕಮ್ಯೂನಿಸ್ಟರು ಭಾವಿಸುತ್ತಾರೆ. ಆರ್ಥಾತ್ ಮಾರ್ಕ್ಸ್‌ವಾದಿಗಳಲ್ಲಿ ಕೆಲವು "ಮೂರ್ಖರು" "ಮೂರ್ಖ" ದಾರಿಗಳಲ್ಲಿ ನಂಬಿಕೆಯನ್ನಿಟ್ಟವರಾಗಿರಬಹುದು. ಆದರೆ ಮಾರ್ಕ್ಸ್‌ವಾದ ಮತ್ತು ಲೆನಿನ್‌ವಾದಗಳು ಕಳೆದೊಂದು ಶತಮಾನದಿಂದ ಎಂಥ ತಾತ್ವಿಕ ಧಾಳಿಗಳನ್ನೆದುರಿಸಿ ನಿಂತು ತಾನೇ ಸತ್ಯವೆಂಬುದನ್ನು ತೋರಿಸಿಕೊಟ್ಟಿದೆ.

"ಮಾರ್ಕ್ಸ್‌ವಾದ ಪ್ರಪಂಚದ ಬಹುಭಾಗವನ್ನು ಗೆದ್ದುಕೊಂಡಿದೆ. ಶ್ರೀಮನ್ನಾರಾಯಣರ ಬೆಂಬಲ ಅಥವಾ ಸಮ್ಮತಿಯಿಲ್ಲದೆಯೇ ಭಾರತದಲ್ಲಿ ಕಮ್ಯೂನಿಸಂ ಯಶಸ್ವಿಯಾಗುತ್ತದೆಯೆನ್ನುವದರಲ್ಲಿ ನನಗೆ, (ಕಮ್ಯೂನಿಸ್ಟರಿಗೆ ಕೊಂಚವೂ ಸಂದೇಹವೇ ಇಲ್ಲ" ಎಂದು ಹೇಳಿದರು.

ಸಂಪಾದಕೀಯ...

ಟ್ರೇಡ್‌ಯೂನಿಯನ್ ಚಳವಳಿಯಲ್ಲಿ ಐಕ್ಯಭಂಜಕ ನೀತಿ !

ಟ್ರೇಡ್ ಯೂನಿಯನ್ ಚಳವಳಿಯಲ್ಲಿ ಮುಂದುವರಿಯುತ್ತಿದ್ದಂತೆ ಐಕ್ಯತೆಯ ಪ್ರಶ್ನೆಯು ಮಹತ್ವದ್ದಾಗಿದೆ. ಭಾರತದ ಟ್ರೇಡ್ ಯೂನಿಯನ್ ಚಳವಳಿಯಲ್ಲಿ ಎ. ಐ. ಟಿ. ಯು. ಸಿ., ಐ. ಎನ್. ಟಿ. ಯು. ಸಿ., ಹಿಂದ್ ಮಜ್ದೂರ್ ಸಭಾ, ಯುನೈಟೆಡ್ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನಂಥ ಟ್ರೇಡ್ ಯೂನಿಯನ್ ಕೇಂದ್ರ ಸಂಸ್ಥೆಗಳಷ್ಟೇ ಅಲ್ಲದೆ, ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ಹಲವು ಅಖಿಲ ಭಾರತ ಫೆಡರೇಷನ್‌ಗಳೂ ಇವೆ. ಕಾರ್ಮಿಕರ ಹಕ್ಕುಬಾಧ್ಯತೆಗಳನ್ನು ರಕ್ಷಿಸಲು ಮತ್ತು ಅವರ ಹಿತಗಳನ್ನು ಸಾಧಿಸಲು ಈ ಎಲ್ಲ ಸಂಸ್ಥೆಗಳ ಐಕ್ಯತೆಯ ಸಾಧನೆಯು ಮಹತ್ವದ್ದಾಗಿರುತ್ತದೆ. ಅಂಥ ಐಕ್ಯತೆಗಾಗಿ ಕಾರ್ಮಿಕ ವರ್ಗವು ಶ್ರಮಿಸುತ್ತಿದೆ.

ಸಂಘಟನಾತ್ಮಕವಾಗಿ ಐಕ್ಯತೆಗೆ ಇಂದು ಪರಿಸ್ಥಿತಿ ಪಕ್ವವಾಗಿಲ್ಲದಿದ್ದರೂ, ಕಾರ್ಮಿಕರನ್ನೆದುರಿಸುತ್ತಿರುವ ಪ್ರಮುಖ ಪ್ರಶ್ನೆಗಳ ಮೇಲಾದರೂ ಸಂಯುಕ್ತ ಕಾರ್ಯಾಚರಣೆ ಇಂದು ಅಗತ್ಯವಾಗಿ ಬಂದಿದೆ. ಅಂಥ ಸಂಯುಕ್ತ ಕಾರ್ಯಾಚರಣೆಗಳು ಈಗ ನಡೆದಿರುವ ನಿದರ್ಶನಗಳು ಇವೆ. ಐ. ಎನ್. ಟಿ. ಯು. ಸಿ ನಾಯಕತ್ವವು ಅಂಥ ಐಕ್ಯತೆಗೆ ವಿರೋಧವಿದ್ದರೂ ಕೂಡ, ಸಂಯುಕ್ತ ಕಾರ್ಯಾಚರಣೆ ನಡೆದಾಗ ಇಂಟಕ್‌ನ ಕಾರ್ಮಿಕರು ಭಾಗವಹಿಸಿರುವ ಉದಾಹರಣೆಗಳೂ ಇವೆ.

ಇಂಥ ಸಂಯುಕ್ತ ಕಾರ್ಯಾಚರಣೆಗಳನ್ನು ಐ. ಎನ್. ಟಿ ಯು. ಸಿ. ಸಾಮಾನ್ಯವಾಗಿ ವಿರೋಧಿಸುತ್ತ ಬಂದಿದೆ. ಅಲ್ಲದೆ ಒಂದು ಕೈಗಾರಿಕೆಗೆ ಒಂದೇ ಸಂಘವಿರಬೇಕೆಂದೂ, ಎರಡು ಮೂರು ಪರಸ್ಪರ ವಿರೋಧೀ ಸಂಘಗಳಿರಕೂಡದೆಂದೂ ಹೇಳಿಕೆಯನ್ನೇ ಮರೆತು ಅದಕ್ಕೆ ವಿರುದ್ಧವಾಗಿ ವರ್ತಿಸುತ್ತಿದೆ. ಪೋಟಿ ಸಂಘಗಳನ್ನು ಸ್ಥಾಪಿಸುತ್ತಿದೆ.

ಇತ್ತೀಚೆಗೆ ನೈನಿತಾಲ್‌ನಲ್ಲಿ ನಡೆದ ತ್ರಿಪಕ್ಷ ಲೇಬರ್ ಸಮ್ಮೇಳನದಲ್ಲಿ ಟ್ರೇಡ್ ಯೂನಿಯನ್ ಚಳವಳಿಯಲ್ಲಿ ಐಕ್ಯತೆಯನ್ನು ಸಾಧಿಸುವ ಉದ್ದಿಶ್ಯದಿಂದ, ಪೋಟಿ ಸಂಘಗಳಿರುವ ಕೈಗಾರಿಕೆಗಳಲ್ಲಿ ಕಾರ್ಮಿಕ ಸಂಘಗಳ ನಡುವಣ ಸಂಬಂಧಗಳ ಬಗ್ಗೆ ಕೆಲವು ಸರ್ವಸಮ್ಮತವಾದ ನಿಯಮಗಳನ್ನು ಪ್ರತಿಪಾದಿಸಿದೆ. ಇಡೀ ಕಾರ್ಮಿಕ ಚಳವಳಿಯು ಇಂದು ಐಕ್ಯತೆಯ ದಿಶೆಯಲ್ಲಿ ಸಾಗುತ್ತಿರುವಾಗ ಐ. ಎನ್. ಟಿ. ಯು. ಸಿ. ನಾಯಕತ್ವವು ಐಕ್ಯಭಂಜಕ ನೀತಿ ಅನುಸರಿಸುತ್ತಿರುವುದು ಖಂಡನೀಯವಾಗಿದೆ.

ಇತ್ತೀಚೆಗೆ ಮೈಸೂರು ರಾಜ್ಯದಲ್ಲಿ 'ಇಂಟಕ್'ನ ಐಕ್ಯಭಂಜಕ ನೀತಿ, ಪೋಟಿ ಸಂಘಗಳನ್ನು ಸ್ಥಾಪಿಸುವ ನೀತಿ ಹೆಚ್ಚಾಗಿದೆ. ವಿಮಾನ ಕಾರ್ಖಾನೆ ನೌಕರರ ಐಕ್ಯತೆಯನ್ನು ಮುರಿದು 'ಇಂಟಕ್' ಹೊಸ ಪೋಟಿ ಸಂಘವನ್ನು ಸ್ಥಾಪಿಸಲು ತೀರ್ಮಾನಿಸಿದೆ. ಅದೇ ರೀತಿಯಲ್ಲಿ ಕೃಷ್ಣ ವೀವಿಂಗ್ ಮಿಲ್ ಕೆಲಸಗಾರರ ಸಂಘದ ವಿರೋಧವಾಗಿ, ಹಿಂದೆ ಚುನಾವಣೆಯಲ್ಲಿ ಪರಾಜಿತರಾದ ನಾಯಕರು ಈಗ ಪೋಟಿ ಸಂಘ ಸ್ಥಾಪಿಸಿದ್ದಾರೆ. ಹೀಗೆ ಅನೇಕ ಕಡೆಗಳಲ್ಲಿ ಕೆಲಸಗಾರರ ಬೆಂಬಲ ಪಡೆದಿರುವ ಸಂಘಗಳಲ್ಲಿ ಐಕ್ಯತೆಯನ್ನು ಮುರಿಯಲು 'ಇಂಟಕ್' ನಾಯಕರುಗಳು ಪೋಟೀ ಸಂಘ ಸ್ಥಾಪಿಸುವ ನೀತಿ ಅನುಸರಿಸುತ್ತಿದ್ದಾರೆ.

ಯೋಜನೆಯನ್ನು ಕಾರ್ಯಗತಗೊಳಿಸುವ ಕಾರ್ಯದಲ್ಲಿ, ಉತ್ಪಾದನೆಯನ್ನು ಹೆಚ್ಚಿಸುವ ಕಾರ್ಯದಲ್ಲಿ ತಮ್ಮ ಪಾತ್ರ ನಿರ್ವಹಿಸಬೇಕಿರುವ ಕಾರ್ಮಿಕರು, ನಿರುದ್ಯೋಗ, ರ್‍ಯಾಷನಲೈಸೇಷನ್, ಕಾರ್ಖಾನೆಗಳ ಮುಚ್ಚುವಿಕೆ, ಸರಕಾರದ ದಬ್ಬಾಳಿಕೆ ಮೊದಲಾದ ಗಂಭೀರವಾದ ಪ್ರಶ್ನೆಗಳನ್ನು ಎದುರಿಸುತ್ತಿರುವ ಕಾರ್ಮಿಕರು 'ಇಂಟಕ್' ನಾಯಕತ್ವದ ಈ ಐಕ್ಯಭಂಜಕ ನೀತಿಯ ಬಗ್ಗೆ ಎಚ್ಚರದಿಂದಿರಬೇಕಾಗಿದೆ. ತಮ್ಮ ಐಕ್ಯತೆಯನ್ನು ಭದ್ರವಾಗಿ ರಕ್ಷಿಸಿಕೊಳ್ಳಲು ಕಾರ್ಮಿಕರು ಪಣತೊಟ್ಟು, ಇಂಟಕ್‌ನ ಐಕ್ಯಭಂಜಕ ನೀತಿಯನ್ನು ವಿರೋಧಿಸಬೇಕಾಗಿದೆ.

— ವಾರದ ವಾರ್ತಾ ಸಮೀಕ್ಷೆ —

(೯ನೇ ಪುಟದಿಂದ)

ಅಧ್ಯಕ್ಷ ಚಮೋನ್‌ರವರು ಪರಿಸ್ಥಿತಿಯನ್ನು ಸುಧಾರಿಸಲು ಅಧ್ಯಕ್ಷ ಪದವಿಯಿಂದ ಇಳಿಯುವ ಸೂಚನೆಯು ಕಂಡುಬರುತ್ತಿದೆ. ಲೆಬನಾನಿನ ಅಂತರಿಕ ಪರಿಸ್ಥಿತಿಯನ್ನು ಬಳಸಿಕೊಂಡು ಮಧ್ಯ ಪ್ರಾಚ್ಯದಲ್ಲಿ ತಮ್ಮ ನೆಲೆಯನ್ನು ಭದ್ರಗೊಳಿಸಿಕೊಳ್ಳಲು ಸಾಮ್ರಾಜ್ಯವಾದಿಗಳ ಯತ್ನ ಮುಂದುವರಿಯುತ್ತಿದೆ. ಲೆಬನಾನಿನಲ್ಲಿ ಭದ್ರವಾಗಿ ಕುಳಿತು ಯುನೈಟೆಡ್ ಅರಬ್ ರಿಪಬ್ಲಿಕ್‌ನ್ ವಿರುದ್ಧ ತಮ್ಮ ಚಟುವಟಿಕೆಯನ್ನು ನಡೆಸುವುದೇ ಅವರ ಉದ್ದಿಶ್ಯವಾಗಿದೆ. ಅವರ ಈ ಯತ್ನವನ್ನು ಮಣ್ಣುಗೂಡಿಸುವುದೂ, ಮಧ್ಯ ಪ್ರಾಚ್ಯದಲ್ಲಿ ಶಾಂತಿಗೆ ಭಂಗಬಾರದಂತೆ ಮಾಡುವುದೂ ಪ್ರಜಾಪ್ರಭುತ್ವವಾದಿಗಳ ಕರ್ತವ್ಯವಾಗಿದೆ.

ಘಾನ ಎರಡು ವರ್ಷಗಳಲ್ಲಿ ಗಣತಂತ್ರವಾಗುವುದು

ಬ್ರಿಟಿಷ್ ಸಾಮ್ರಾಜ್ಯವಾದಿಗಳ ವಸಾಹತು ಸಂಕೋಲೆಯಿಂದ ಬಿಡುಗಡೆ ಹೊಂದಿ ಸ್ವತಂತ್ರ ರಾಜ್ಯವಾಗಿರುವ ಆಫ್ರಿಕ ಖಂಡದ ಘಾನ ಇನ್ನೆರಡು ವರ್ಷಗಳಲ್ಲಿ ಗಣರಾಜ್ಯವಾಗುವುದೆಂದು ಪ್ರಧಾನ ಮಂತ್ರಿ ಡಾ|| ಕ್ವಾಮೆನುಕುಮಾ ತಿಳಿಸಿದ್ದಾರೆ. ಗಣರಾಜ್ಯವಾಗಿ ಘಾನ ವಿಶ್ವದ ಇತರ ರಾಷ್ಟ್ರಗಳ ಸಾಲಿನಲ್ಲಿ ವಿಶ್ವಶಾಂತಿಗಾಗಿ, ಸ್ವಾತಂತ್ರ್ಯಕ್ಕಾಗಿ ಶ್ರಮಿಸುವುದೆಂದು ನಿರೀಕ್ಷಿಸುತ್ತೇವೆ.

ರಾಜಾಜಿ ಹೇಳುತ್ತಾರೆ:

ಅಮೆರಿಕೆಯ ನೀತಿ—ಕುಂಟು ಕಾಲಿನ ಕತ್ತೆಯ ನೀತಿ !

ಹಂಗೇರಿಯ ಇಮ್ರೆನಾಜ್ ಮತ್ತಿನ್ನಿತರರ ಗಲ್ಲು ಶಿಕ್ಷೆಗೂ ವಿಶ್ವಶಾಂತಿಯ ಮಾತುಕತೆಗಳಿಗೂ ಏನೇನೂ ಸಂಬಂಧವಿಲ್ಲ ಎನುತ್ತಾರೆ ಪ್ರಸಿದ್ಧ ರಾಜಕಾರಣಿ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರು.

ಸ್ಟಾಕ್ ಹೋಮ್ ನಲ್ಲಿ ನಡೆಯಲಿರುವ ವಿಶ್ವಶಾಂತಿ ಮತ್ತು ಅಂತರ್ರಾಷ್ಟ್ರೀಯ ಸಹಕಾರ ಸಮ್ಮೇಲನಕ್ಕೆ ಬೆಂಬಲ ನೀಡುವ ಮದರಾಸಿನ ಸಭೆಯಲ್ಲಿ ಶ್ರೀ ರಾಜಾಜಿಯವರು ಮಾತನಾಡುತ್ತ ಶೃಂಗ ಸಭೆ ಸೇರಿಸುವದಕ್ಕಾಗಲಿ, ನ್ಯೂಕ್ಲಿಯರ್ ಶಸ್ತ್ರಾಸ್ತ್ರಗಳನ್ನು ನಿಷೇಧಿಸಲಿಕ್ಕಾಗಲಿ ಇಮ್ರೆನಾಜ್ ಮುಂತಾದವರ ಗಲ್ಲು ಶಿಕ್ಷೆ ಅಡಚಣೆಯಾಗುವುದೆನ್ನುವುದು ಅರ್ಥವಿಲ್ಲದ ಮಾತು ಎಂದು ಸ್ಪಷ್ಟವಾಗಿ ಹೇಳಿದರು.

ರಾಜಾಜಿಯವರು ಮಾತನಾಡುತ್ತ ಹೀಗೆ ಹೇಳಿದರು:

ಶೃಂಗ ಸಭೆಯ ಆಹ್ವಾನವನ್ನು ಭೋಜನ ಕೂಟದ ಆಹ್ವಾನವನ್ನು ತಿರಸ್ಕರಿಸುವವರಂತೆ ಪಾಶ್ಚಿಮಾತ್ಯ ರಾಷ್ಟ್ರಗಳು ತಿರಸ್ಕರಿಸುತ್ತಾ ಶಾಂತಿಯ ಬಗ್ಗೆ ತಮಗಿರುವ ಅಸಮ್ಮತಿಯನ್ನು ವ್ಯಕ್ತಪಡಿಸಿದ್ದಾರೆ.

ಪ್ರತಿಯೊಂದು ಸಲವೂ ಪಾಶ್ಚಿಮಾತ್ಯ ಶಕ್ತಿಗಳು ಶಾಂತಿಯ ಮಾತುಕತೆಗಳಿಗೆ ಏನಾದರೊಂದು ಕಾರಣವನ್ನು ಹೇಳುತ್ತ ಬಂದಿವೆ. ಇದೀಗ ನಾಜ್‌ರವರ ಗಲ್ಲು ಅಮೇರಿಕೆಗೆ ದೊಡ್ಡದೊಂದು ಆತಂಕವಾಗಿ ತೋರುತ್ತಿದೆ. ತಮಿಳುನಲ್ಲಿಯ ಪದ್ಯವೊಂದು "ಕುಂಟುಕಾಲಿನ ಕತ್ತೆಯೊಂದಕ್ಕೆ ಭಾರಹೊರಲು ಮನಸ್ಸಿರಲಿಲ್ಲ. ಮಳೆಯೊಮ್ಮೆ ಬಿದ್ದಾಗ ಕತ್ತೆ ಕಾಲು ಜಾರಿತು. ಅದು ಬಿದ್ದದ್ದೇ ನೆಪವಾಗಿ ಮೇಲೇಳಲಿಕ್ಕೆ ತಿರಸ್ಕರಿಸಿತು" ಎಂದಿದೆ.

"ನಾಜ್‌ಗೆ ಶಿಕ್ಷೆಯಾಯಿತು. ಅದಕ್ಕೆ ನ್ಯೂಕ್ಲಿಯರ್ ಶಸ್ತ್ರಾಸ್ತ್ರಗಳ ಆಸ್ಫೋಟನೆಯಾಗಲಿ" ಎಂಬ ತರ್ಕವನ್ನು ಕೊಂಚ ನೋಡಿ! ನಾಜ್ ಜೈಲಿನಲ್ಲಿದ್ದುದೂ ಅವನ ಭವಿತವ್ಯವು ಏನೆಂಬುದೂ ಅವರಿಗೆ ಗೊತ್ತಿದ್ದ ವಿಷಯವೇ ಆಗಿತ್ತು. ಆದರೆ ಇಷ್ಟು ದಿನ ಅವರೇನೂ ಈ ವಿಷಯವಾಗಿ ಮಾತನಾಡಲಿಲ್ಲ. ಆದರೆ ಈಗ ಹೇಳುತ್ತಾರೆ "ನಾಜ್ ಹತ್ಯೆಯಾಯಿತು. ಅದಕ್ಕೆ ಶೃಂಗ ಸಮ್ಮೇಳನದ ಮಾತುಕತೆಗಳನ್ನು ನಡೆಸುವುದು ಪ್ರಯೋಜನವಿಲ್ಲ. ಕುಂಟುಕಾಲಿನ ಕತ್ತೆಯ ಕತೆಯೇ ಇದಕ್ಕಿಂತ ಒಳ್ಳೆಯದಾದು! (ನಗೆ)

"ಭಾರತದ ಸ್ವಾತಂತ್ರ್ಯ ಹೋರಾಟದ ಕಾಲಕ್ಕೆ ಬ್ರಿಟಿಷರು ಯಾವ ನ್ಯಾಯ ವಿಚಾರಣೆಗಳೂ ಇಲ್ಲದೆ ನಮ್ಮ ಜನರ ಮರ್ದನ ಮಾಡುತ್ತಿದ್ದಾಗ ನನ್ನ ಈ ಅಮೆರಿಕನ್ ಗೆಳೆಯರು ಇಂಗ್ಲಂಡಿನೊಡನೆ ರಾಜಕೀಯ ಸಂಬಂಧಗಳನ್ನು ಕಡಿದುಕೊಂಡಿದ್ದರೆ? ಬ್ರಿಟಿಷರು ನಿಶ್ಶಸ್ತ್ರರಾದ, ನಿರುಪರಾಧಿಗಳಾದ 300 ಜನರನ್ನು ಜೂಲಿಯನ್‌ವಾಲಾ ಬಾಗ್‌ನಲ್ಲಿ ಗುಂಡಿಕ್ಕಿ ಕೊಲ್ಲಲಿಲ್ಲವೆ? ಆಗ ಅಮೇರಿಕೆಯು ಬ್ರಿಟಿಷರೊಡನೆ ತನ್ನ ಸಂಬಂಧಗಳನ್ನು ಕಳೆದಕೊಂಡಿತೆ? ಈ ವಿಷಯಗಳನ್ನೆಲ್ಲ ಮಾತನಾಡಲು ನನಗೆ ಇಷ್ಟವಿಲ್ಲ ಯಾಕೆಂದರೆ ನಾವು ಈಗ ಬ್ರಿಟಿಷರಿಂದ ಮುಕ್ತರಾಗಿದ್ದೇವೆ ಮತ್ತು ಇಬ್ಬರೂ ಸ್ನೇಹಿತರಾಗಿದ್ದೇವೆ. ಬ್ರಿಟಿಷರು ಗಾಂಧೀಜಿಯವರನ್ನು ಕಾರಗಾರಕ್ಕೆ ಅಟ್ಟಿದಾಗ ಅಮೇರಿಕೆಯು ಅವರೊಂದಿಗೆ ರಾಜತಂತ್ರಿಕ ಸಂಬಂಧಗಳನ್ನು ಕಳೆದುಕೊಂಡಿತೆ? ಅಮೇರಿಕೆಯು ನಾಜ್ ಹತ್ಯೆಯನ್ನು ಪ್ರತಿಭಟಿಸಲಿ. ಆದರೆ ನಿಶ್ಶಸ್ತ್ರೀಕರಣ ಹಾಗೂ ನ್ಯೂಕ್ಲಿಯರ್ ಶಸ್ತ್ರಾಸ್ತ್ರಗಳ ನಿಷೇಧವನ್ನು ಪ್ರತಿಭಟಿಸುವುದು ಸರಿಯಲ್ಲ. ನಿರಾಯುಧೀಕರಣ ಸಮ್ಮೇಳನದ ಕೂಡುವಿಕೆಗೆ ಅಥವಾ ನ್ಯೂಕ್ಲಿಯರ್ ಪ್ರಯೋಗಗಳ ನಿಷೇಧಕ್ಕೆ ಇದಾವುದೂ ಸಮಂಜಸವಾದ ಕಾರಣವಲ್ಲ."

ಬೆಂಗಳೂರು ಸಿಲ್ಕ್ ಕಾರ್ಮಿಕರ ಬಹಿರಂಗ ಸಭೆ

ತಾ. 17—6—58 ಂದು ಸಾಯಂಕಾಲ 6 ಘಂಟೆಗೆ ಕಬ್ಬನ್ ಪೇಟೆಯಲ್ಲಿರುವ ನಾರಾಯಣಶೆಟ್ಟಿ ಪೇಟೆಯಲ್ಲಿ ಬೆಂಗಳೂರು ಸಿಲ್ಕ್ ಕೆಲಸಗಾರರ ಸಭೆಯು ಸಂಘದ ಅಧ್ಯಕ್ಷರಾದ ಎಸ್. ಸೂರ್ಯನಾರಾಯಣರಾಯರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ಇದಕ್ಕೆ ಮೊದಲು ಸಿಲ್ಕ್ ಕಾರ್ಮಿಕರು ಬಸಪ್ಪ ಫ್ಯಾಕ್ಟರಿಯ ಕಾರ್ಮಿಕರಿಗೆ ತಮ್ಮ ಸಹಾನುಭೂತಿಯನ್ನು ತೋರಿಸಲು ನರಸಿಂಹರಾಜ ರೋಡು, ಹಳೇಕುಂಬಾರಗುಂಡಿ ರಸ್ತೆ, ಕಬ್ಬನ್‌ಪೇಟೆ ಮೈಯಿನ್ ರೋಡುಗಳಲ್ಲಿ ಮೆರವಣಿಗೆ ಹೊರಟು ಬಸಪ್ಪ ಫ್ಯಾಕ್ಟರಿಯ ಮುಂಭಾಗದಲ್ಲಿ ಬಂದು ಸೇರಿದರು.

ಕಾರ್ಮಿಕರ ಮುಖಂಡರಾಗಿದ್ದ ವೃದ್ಧ ಪಿತಾಮಹ ಚಕ್ಕರೈಶೆಟ್ಟಿಯಾರ್‌ರವರ ನಿಧನದ ಬಗ್ಗೆ ಗೌರವಾರ್ಥ ಒಂದು ನಿಮಿಷ ಮೌನವನ್ನು ಆಚರಿಸಲಾಯಿತು.

ನ್ಯಾಯವಾದ ಬೇಡಿಕೆಗಳಿಗಾಗಿ ಭಾರತದ ಬಂದರಿನ ಕೆಲಸಗಾರರು ನಡೆಸುತ್ತಿರುವ ಹೋರಾಟಕ್ಕೆ ಈ ಸಭೆಯು ಬೆಂಬಲವನ್ನು ನೀಡುತ್ತದೆ. ಮದರಾಸಿನಲ್ಲಿ ಬಂದರು ಕೆಲಸಗಾರರ ಮೇಲೆ ವಿನಾಕಾರಣವಾಗಿ ಗೋಲಿಬಾರ್ ಮಾಡಿ ಅನೇಕ ಕಾರ್ಮಿಕರ ಪ್ರಾಣಾಪಹರಣ ಮಾಡಿರುವ ಸರ್ಕಾರದ ನೀತಿಯನ್ನು ಕಟುವಾಗಿ ಖಂಡಿಸುತ್ತದೆ ಮತ್ತು ಈ ಗೋಲಿಬಾರಿನ ಬಗ್ಗೆ ಸರ್ಕಾರ ನ್ಯಾಯವಾದ ವಿಚಾರಣೆ ಮಾಡಬೇಕೆಂದು ಒತ್ತಾಯ ಮಾಡುತ್ತದೆ.

ರಾಮಚಂದ್ರ ಸಿಲ್ಕ್ ವೀವಿಂಗ್ ಫ್ಯಾಕ್ಟರಿಯ ಮಾಲೀಕರಾದ ಡಿ. ಎಂ ಬಸಪ್ಪನವರು ಕಾರ್ಮಿಕರಿಗೆ ಸಂಬಳವನ್ನು ಸಹ ಕೊಡದೆ ಮೋಸಮಾಡುವ ಉದ್ದಿಶ್ಯದಿಂದ ಫ್ಯಾಕ್ಟರಿಯನ್ನು ನಿಲ್ಲಿಸಿ ತಲೆತಪ್ಪಿಸಿಕೊಂಡು ಓಡಾಡುತ್ತಿರುವುದನ್ನು ತೀವ್ರವಾಗಿ ಖಂಡಿಸುತ್ತದೆ. ಸದರಿ ಕಾರ್ಮಿಕರಿಗೆ ಕಾನೂನು ಪ್ರಕಾರ ಬರಬೇಕಾದ ಸಂಬಳ, ಪರಿಹಾರ ಇತ್ಯಾದಿಗಳನ್ನು ಜಾಗ್ರತೆ ಕೊಡಿಸಿಕೊಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತದೆ.

ನೇಗಿಲ ಸಾಲ ಮೇಲೆ

ಎಲಿನ್ ಪೆಲಿನ್ ಬಲ್ಗೇರಿಯಾದ ಉತ್ತಮ ಕತೆಗಾರರಲ್ಲೊಬ್ಬರು. ತಮ್ಮ ಸಾಹಿತ್ಯಕ ಶಕ್ತಿಯನ್ನು ಇಲ್ಲಿ ತೋರಿಸಿರುವ ಈ ಒರೆಹಗಾರರು ಬಲ್ಗೇರಿಯಾದಲ್ಲಿ ಈ ಶತಮಾನದ ಮೊದಲ ದಶಕದಲ್ಲಿ ಕಠಿಣ ಜೀವನ, ದುರ್ದೆಶೆಗಳಲ್ಲಿ ಮುಳುಗಿದ್ದ ರೈತರು ಎದುರಿಸುತ್ತಿದ್ದ ಕ್ರೂರವಾದ ಸ್ಥಿತಿ, ಅವನತಿಗಳನ್ನು ಇಲ್ಲಿ ಚಿತ್ರಿಸಿದ್ದಾರೆ.

ಮಳೆ ಬಂತು. ಇಡೀ ವಾರವೆಲ್ಲ ನಿಶ್ಚಲವಾಗಿ ಹಗಲು ರಾತ್ರಿಯೆನ್ನದೆ ಮಳೆ ಸುರಿದೇ ಸುರಿಯಿತು. ನೆಲದಾಯಿ ನೀರುಂಡು ತಣ್ಣಗಾದಳು. ಆ ಮೇಲೆ ಮೆದು ವಾಚ ಗಾಳಿ ಬೀಸತೊಡಗಿತು, ಆಕಾಶವೆಲ್ಲ ನಿರಭ್ರವಾಯಿತು, ಶರದೃತುವಿನ ಸೂರ್ಯ ಥಳಥಳಿಸುತ್ತ ಮೂಡಿಬಂದ. ಭೂಮಿ ಆರಿ ಬಂತು. ಹವೆ ತುಂಬ ಚೆನ್ನಾಗಿತ್ತು. ಅಂದರೆ ನೇಗಿಲು ಹೂಡಲು ತಕ್ಕ ವಾತಾವರಣ ನೆಲೆಸಿತ್ತು.

ಜೋನ್ ಕ್ರೈನೆನ್ಸ್ ಸಿವುಕ್ಷಾ ಮತ್ತು ಬೆಲ್ಕೋರವರಿಗೆ ನೊಗಹೂಡಿದ. ನೇಗಿಲ ಹಿಂದೆ ಹೆಜ್ಜೆಗಳನ್ನು ಹಾಕುತ್ತ ನಡೆದ. ಆತನ ಜಮೀನು ವಿಸ್ತಾರವಾದ, ಸುಂದರವಾದ ಇಳಿಜಾರು ಪ್ರದೇಶದಲ್ಲಿತ್ತು, ಸುತ್ತಲೆಲ್ಲ ಕಾಡು ಬೀಡುಬಿಟ್ಟಿತ್ತು. ಮಣ್ಣು ಗರಿಗರಿಯಾಗಿತ್ತು, ಸಕ್ಕರೆಯಂತೆ ಪುಡಿಪುಡಿಯಾಗುತ್ತಿತ್ತು.

ಕೈ ಕೋಲನ್ನು ಆಡಿಸುತ್ತ ಆತ ಕೂಗಿದ.

"ಹೇ ಏಳು ನಡೆ ನಡೆ !"

ಕಾಡಿನಿಂದ ಪ್ರತಿಧ್ವನಿ ಕೇಳಬಂತು. ವೃದ್ಧ ಬೆಲ್ಕೋ ಪ್ರಸನ್ನತೆಯಿಂದ ಬಾಲವನ್ನಾಡಿಸಿ ಹೆಜ್ಜೆ ಹಾಕಿತು. ಬೆಲ್ಕೋಗಿಂತ ಆಕಾರದಲ್ಲಿ ಅರ್ಧದಷ್ಟಿದ್ದ ವೃದ್ಧ ಹಾಗೂ ದುರ್ಬಲ ಹಸು ಸಿವುಕ್ಷಾ ಹೆಜ್ಜೆ ಹಾಕುವ ಪ್ರಯತ್ನ ಮಾಡಿ ಅದರ ಪಕ್ಕದಲ್ಲಿಂದಲೇ ನಿಧಾನವಾಗಿ ನಡೆಯಿತು.

ನೇಗಿಲಿನ ಸಾಲುಗಳ ಮೇಲೆ ಸಾಲುಗಳನ್ನು ಅವು ಎಳೆದವು, ಇಡೀ ಒಂದು ಭಾಗದ ಉಳುಮೆ ಮುಗಿಯಿತು. ಆಗ ಜೋನ್‌ನ ಕಳಾಹೀನ ಮುಖ ಒಂದಿಷ್ಟು ಮಿನುಗಿತು. ಕಷ್ಟಗಳನೆಲ್ಲ ಮರೆತು ಸಿಳ್ಳು ಹಾಕತೊಡಗಿದ.

"ಬೆಲ್ಕೋ, ಅಷ್ಟೊಂದು ಜೋರಾಗಿ ನಡೆಯಬೇಡ ! ಸಿವುಕ್ಷಾ ನಿನ್ನೊಂದಿಗೆ ನಡೆಯಲಾರದು. ಸಿವುಕ್ಷಾ, ನಡೆ, ಹಲ್. ಓ, ನನ್ನ ಪ್ರೀತಿಯ ಸಿವುಕ್ಷಾ ನಡೆ ! ನೀನು ದಣಿದಿರುವಿ. ಆದರೆ ನಾನೇನು ಮಾಡಬಲ್ಲೆ ? ನಾನು ಕೂಡಾ ದಣಿದಿದ್ದೇನೆ!"

ಅನುಭವಿಯಾದ ವೃದ್ಧ ಎತ್ತು ಜೋರಾಗಿ ಒಮ್ಮೆ ಶ್ವಾಸೋಚ್ಛ್ವಾಸ ಮಾಡಿತು, ಮತ್ತೆ ಜೋರಾಗಿ ಮುಂದೆ ನಡೆಯಿತು. ಆದರೆ ಸಣ್ಣ ಸಿವುಕ್ಷಾಗೆ ಸಾಕುಸಾಕಾಗಿ ಹೋಗಿತ್ತು. ಅದರ ಶಕ್ತಿಯೆಲ್ಲಾ ಹ್ರಾಸವಾಗಿತ್ತು. ಬಾಯಿ ತೆರೆದಿತ್ತು, ಬೆನ್ನು ಬಾಗಿತ್ತು. ಅದರ ತೆಳ್ಳಗಿನ ಬಾಲ ಮುರುಟಿಕೊಂಡಿತ್ತು. ನಾಲಿಗೆಯನ್ನು ಹೊರಗೆಳೆಯುತ್ತ ಅದು ಪ್ರಯಾಸದಿಂದ ಮುಂದೆ ಹೆಜ್ಜೆ ಹಾಕಿತು.

ಅಲ್ಲಿ ಅಕ್ಕಪಕ್ಕದಲ್ಲಿ, ಸುತ್ತಲು ಯಾರೂ ಇದ್ದಿಲ್ಲ. ಚಳಿಗಾಲದ ಬೆಳಕು ಅಲ್ಲಿ ತುಳಿದು ಮಂದವಾಗಿ ಹರಿದಿತ್ತು.

"ಸಿವುಕ್ಷಾ, ನನ್ನ ಪ್ರೀತಿಯೆ, ಬಾ" ಜೋನ್ ಕ್ರೈನೆನ್ಸ್ ಹಸುವನ್ನು ಸಂಬೋಧಿಸಿದ. ಆ ತನ್ನ ಗೋವು ಕ್ಷಣಕ್ಷಣಕ್ಕೂ ಹೇಗೆ ದಣಿಯುತ್ತಿದೆ, ಹೇಗೆ ಶಕ್ತಿಗುಂದುತ್ತಿದೆಯೆಂಬುದನ್ನು ಆತ ಗಮನಿಸುತ್ತಲೇ ಮಾತನಾಡಿದ್ದ.

"ಕೊಂಚ ತಡೆ, ವಿಶ್ರಮಿಸೋಣ"

ದಣಿದ ಮೂಕ ಪ್ರಾಣಿಗಳು ತಡೆದು ನಿಂತವು. ಕ್ರೈನೇನ್ ಅವುಗಳ ಬೆನ್ನಮೇಲೇರಿ ಅವುಗಳ ಹಣೆಯನ್ನು ಸವರತೊಡಗಿದ

"ಬೆಲ್ಕೋ ನಿನಗೆ ಹೃದಯವಿಲ್ಲವೇ ? ಪಾಪ ಬಡ ಸಿವುಕ್ಷಾನನ್ನು ಅಷ್ಟೇಕೆ ಗೋಳು ಹುಯ್ದುಕೊಂಡೆ ?"

ಆ ಮೂಕ ಪ್ರಾಣಿಗಳಿಗೆ ಅವನೆಂದ.

ಸಿವುಕ್ಷಾ ಮತ್ತು ಬೆಲ್ಕೋಗಳು ಭಾರವಾಗಿ ಉಸಿರಾಡಿಸುತ್ತ, ದುಃಖ ತುಂಬಿದ ಕಣ್ಣುಗಳಿಂದ ನಿರ್ವಿಕಾರವಾಗಿ ಸುಮ್ಮನೆ ಅವನನ್ನೇ ನೋಡಿದವು. ಸಿವುಕ್ಷಾವಿನ ಬಾಯಿಂದ ನೊರೆ ಹೊರಗೆ ಬರುತ್ತಿತ್ತು. ಸಿವುಕ್ಷಾ ಧನಳವರ್ಣದ ತನ್ನ ಜೊತೆಗಾರನನ್ನು ಮತ್ತು ತನ್ನ ಯಜಮಾನನ್ನೊಮ್ಮೆ ನೋಡಿತು. ವಿಷಣ್ಣತೆಯಲ್ಲಿ ಅದರ ಶಿರ ಮುಳುಗಿದಂತಾಗಿತ್ತು.

"ಓ, ಏನು ಸಮಾಚಾರ? ಮಾತಾಡು! ವೈಗೆ ಹುಷಾರಿಲ್ವೆ ಸಿವುಕ್ಷಾ? ಓ ನನ್ನ ಪ್ರೀತಿಯೆ...... ಇಂದು ಇನ್ನೊಂದಿಷ್ಟು ಕೆಲಸ ಮಾಡೋಣ. ನಾಳೆ ರಜೆ. ಇಡೀ ದಿನವೆಲ್ಲ ವಿಶ್ರಾಂತಿ ತಗೋ. ಬೆಲ್ಕೋ ಯಾಕೆ ನನ್ನನ್ನು ನೋಡುತ್ತಿರುವಿ? ನೀನೊಬ್ಬ ನಾಯಕ ಸಿವುಕ್ಷಾ ನಾಯಕ" ಹೀಗೆ ಕ್ರೈನೇನ್ ತನ್ನ ಪ್ರಾಣಿಗಳಿಗೆ ಮಾತನಾಡಿದ.

ಆದರೆ ಸಿವುಕ್ಷಾ ತಲೆಯನ್ನು ಮೇಲೆತ್ತಲಿಲ್ಲ. ಸಂಕಟಪಡುತ್ತಿದ್ದ ಅದರ ಎದೆಯನ್ನು ಯಾವ ಮಾತೂ ಸಮಾಧಾನಪಡಿಸಲಿಲ್ಲ. ನವೆಯುತ್ತಿರುವ ಅದರ ನೋಟ ಜ್ವರಭಾರದಿಂದ ಕೂಡಿದಂತೆ ಕಂಡಿತು. ಕಾಲುಗಳು ಜೋರಾಗಿ ಕಂಪಿಸುತ್ತಿದ್ದವು.

"ರೋಗಗ್ರಸ್ತ ನನ್ನ ಸಿವುಕ್ಷಾ ಏನಾಗಿದೆ ನಿನಗೆ ಹೇಳು". ಜೋನ್ ಅತ್ಯಂತ ಕಳವಳದಿಂದ ನುಡಿದು ಮಕ್ಕಳನ್ನು ತಟ್ಟುವಂತೆ ಅದನ್ನು ತಟ್ಟತೊಡಗಿದ. ಆ ಮೇಲೆ ಆತ ನೇಗಿಲನ್ನು ಹಿಡಿದು ಜೋರಾಗಿ ಅವುಗಳಿಗೆಂದ :

"ಹೇ ಹಲ್. ನಡೀರಿ ಮುಂದೆ!"

ಬೆಲ್ಕೋವಿಗೆ ಕೊಂಚ ಕಷ್ಟವೆನಿಸಿದರೂ ಮುಂದೆ ನಡೆಯಿತು. ಸಿವುಕ್ಷಾ ಅದರೊಂಗೆ ಹೆಜ್ಜೆ ಹಾಕಲು ಬಲವಾಗಿಯೆ ಯತ್ನಿಸಿತು. ಆದರೆ ಪ್ರಯೋಜನವಾಗಲಿಲ್ಲ. ನಿಂತೇ ಬಿಟ್ಟಿತು.

"ನಡೀರಿ ಮುಂದೆ" ದೊಡ್ಡದಾದ ಧ್ವನಿಯಲ್ಲಿ ಜೋನ್ ಮತ್ತೆ ಕೂಗಿ ಅವುಗಳನ್ನು ದುಡಿಮೆಗೆ ಹುರಿಗೊಳಿಸಲೆತ್ನಿಸಿದ.

ಅಂಥದೇ ಪ್ರತಿಧ್ವನಿ ಮತ್ತೆ ಕಾಡಿನಿಂ ಬಂತು.

ಬೆಲ್ಕೋ ಮತ್ತೆ ಮುಂದೆ ನಡೆಯಿತು. ಸಿವುಕ್ಷಾ ಮತ್ತೊಂದು ಪ್ರಯತ್ನ ಮಾಡಿತು. ಆದರೆ ಅದರ ಕಾಲುಗಳು ಕೇಳಲೇಯಿಲ್ಲ, ಹಸು ತತ್ತರಿಸಿತು. ನೊಗದಡಿಯಲ್ಲೇ ದೀನವಾಗಿ ಬಿದ್ದುಕೊಂಡಿತು.

ಜೋನ್ ಈ ಸಲ ಬೆದರಿದ. ಕೈಯಲ್ಲಿಯ ಕೋಲನ್ನು ಬಿಸಾಕಿದ. ಬೆಲ್ಕೋವಿನ ಹೆಗಲಿನಿಂದ ನೊಗವನ್ನು ಕಳಚಿ ಕಳವಳದಿಂದ ಸಿವುಕ್ಷಾವಿನ ಎದುರು ನಿಂತ. ಸಿವುಕ್ಷಾ ಮಲಗೇ ಇತ್ತು. ಅದರ ಕೊರಳು ತುಂಬಿ ಬಂದಿತ್ತು, ಅದರ ಮೂತಿ ಮಣ್ಣಿನಲ್ಲಿ ಮುಚ್ಚಿಕೊಂಡಿತ್ತು, ಕಣ್ಣುಗಳು ಮುಚ್ಚಿಕೊಂಡಿದ್ದವು, ಭಾರವಾಗಿ ಮೇಲುಸಿರನ್ನೆಳೆಯುತ್ತಿತ್ತು.

"ಏಳು ಸಿವುಕ್ಷಾ, ಮೇಲೇಳು" ಎನ್ನುತ್ತ ಜೋನ್ ಅದರ ನೊಗ ಕಳಚಿ ಕೊಂಬು ಹಿಡಿದು ಮೇಲೆತ್ತತೊಡಗಿದ.

ಸಿವುಕ್ಷಾ ಕಷ್ಟಪಟ್ಟು ಕಣ್ಣು ತೆರೆಯಿತು. ಏನನ್ನೊ ಹೇಳುವಂತೆ ಒಡೆಯನನ್ನು ನೋಡಿತು. ಅದಕ್ಕೆ ಹೀಗೆ ಹೇಳುವುದು ಬೇಕಾಗಿತ್ತೇನೊ: "ನಾನು ಶಾಂತಿಯಿಂದ ಸಾಯಬೇಕು" ಮತ್ತೆ ಅದು ಕಣ್ಣು ಮುಚ್ಚಿತು.

ಏನು ಮಾಡಬೇಕೆಂಬುದು ತೋಚದೆ ಜೋನ್ ಅದರ ಪೈದಡವಿದ. ನೇಗಿಲು ಹೂಡಲ್ಪಟ್ಟ ಅರ್ಧ ಹೊಲ ಸೂರ್ಯನ ಬೆಳಕಿನಲ್ಲಿ ಬೆಚ್ಚಗಾಗಿತ್ತು. ಬೆಟ್ಟಗಳಾಚೆ ಇಳಿದು ನಡೆದಿದ್ದ ಸೂರ್ಯನೊಬ್ಬ ಮಾತ್ರ ಆಕಾಶದಿಂದ ಕೆಳಗೆ ನೋಡುತ್ತಿದ್ದ. ಸುತ್ತಲು ಯಾರೂ ಇರಲಿಲ್ಲ. ಕಾಡಿನಲ್ಲಿ ಮೌನ ತುಂಬಿತ್ತು.

"ಸಿವುಕ್ಷಾ, ಬಾ, ಮೇಲೇಳು. ನೋಡು, ಬೆಲ್ಕೋ ನಿನ್ನನ್ನು ತಮಾಷೆ ಮಾಡುತ್ತಿದೆ. ನೋಡು ಮಣ್ಣು ಹೇಗಿದೆ. ನೇಗಿಲ ಹೂಡಲು ಎಷ್ಟು ಚೆನ್ನಾಗಿದೆ !"

ಆ ಹಸುವಿನ ಕೊಂಬುಗಳನ್ನು ಹಿಡಿದು ಅದನ್ನು ಮೇಲೆತ್ತಲಾರಂಭಿಸಿದ. ನೆಲದಲ್ಲಿ ತನ್ನದೊಂದು ಕಾಲನ್ನೂರಿ ಅದು ಮೇಲೇಳಲು ಕೊನೆಯ ಪ್ರಯತ್ನ ಮಾಡಿತು, ಆದರೆ ಸಾಧ್ಯವಾಗಲಿಲ್ಲ. ಮತ್ತೆ ಅದರ ತಲೆ ನೆಲದ ಮೇಲೆ ಬಿತ್ತು. ಮೊದಲಿನಕ್ಕಿಂತಲೂ ಜೋರಾಗಿ ಮೇಲುಸಿರನ್ನು ಬಿಡತೊಡಗಿತು. ಜೋನ್ ಅದರೆದುರಿನಲ್ಲಿ ಕುಳಿತು, ಅದರ ತಲೆಯನ್ನು ತನ್ನ ತೊಡೆಯ ಮೇಲೆ ತೆಗೆದುಕೊಂಡು, ತಲೆ ತಟ್ಟಿ ಮುತ್ತಿಟ್ಟ.

"ಹಾಗೆ ಮಾಡಬೇಡ ನನ್ನ ಪ್ರೀತಿಯೆ. ನನ್ನ ಮೇಲೆ ಕರುಣೆ ತೋರಿಸು. ಕೇಳು, ಒಂದಿಷ್ಟು ಕೇಳು. ಈಗ ಉಳಿದಿರುವ ಭೂಮಿ ಇಷ್ಟೇ, ಮುಗಿದುಹೋಯಿತು. ಈಗ ಉಳಿಬಿಡೋಣ. ಆಮೇಲೆ ನಾವು ದೀರ್ಘವಾಗಿ ಮತ್ತು ಚೆನ್ನಾಗಿಯೇ ವಿಶ್ರಾಂತಿ ತೆಗೆದುಕೊಳ್ಳೋಣ. ನೀನು ಜೀವಿಸಿರುವವರೆಗೂ ಇನ್ನು ನಿನಗೆ ನಾನೆಂದೂ ನೊಗ ಕಟ್ಟಲಾರೆ. ನಿನ್ನ ಪುಟ್ಟ ಗಾಲಿತ್ಸಾ ಬೆಳೆದು ದೊಡ್ಡವನಾಗಿ ಬೆಲ್ಕೋವಿಗೆ ಸಹಾಯ ಮಾಡುತ್ತಾನೆ. ನೀನು ಕೊಟ್ಟಿಗೆಯಲ್ಲಿ ಹನ್ನೆರಡು ತಾಸೂ ಮಲಗಿಕೊಂಡೇ ಇರಬಹುದು. ಮಕ್ಕಳು ದಿನಾಲು ನಿನಗೆ ಬಿಳಿಯ ಚೊಂಬಿನಲ್ಲಿ ನೀರು ಕುಡಿಸುತ್ತಾರೆ, ದಿನಾಲು ನಿನ್ನನ್ನು ತಿರುಗಿಸುತ್ತಾರೆ, ಬೆಳಗಿನಲ್ಲಿ ಆಹಾರ ಹಾಕುತ್ತಾರೆ. ಆಮೇಲೆ ನೀನು ಸುಧಾರಿಸಿಕೊಳ್ಳುವಿ, ಗಟ್ಟಿಮುಟ್ಟಾಗುವಿ, ಅಲ್ವೆ? ಗಾಲಿತ್ಸಾ ಮತ್ತು ಬೆಲ್ಕೋ ಉಳುತ್ತಿರುವಾಗ ನೀನು ಇಳಿಜಾರು ಪ್ರದೇಶವನ್ನು ನೋಡುತ್ತಿರು, ಸಂತೋಷದಿಂದ ಅವರ ಕಾರ್ಯವನ್ನು ನೋಡುತ್ತಿರು ಮತ್ತು "ಕೆಲಸ ಮಾಡಿ !" ಎಂದು ಅವರಿಗೆ ಹೇಳುತ್ತಿರು. ಸಾಯಂಕಾಲ ಗಾಲಿತ್ಸಾವನ್ನು ಬಿಟ್ಟುಬಿಟ್ಟಾಗ ಅದು ನಿನ್ನ ಬಳಿ ಬಂದು ಪ್ರೈನೆಕ್ಕಿ ಹೇಳುತ್ತದೆ: "ನಮಸ್ಕಾರ, ನನ್ನ ವೃದ್ಧ ತಾಯಿ, ಬಾ, ಏಳು ಎದ್ದೇಳು."

ಆದರೆ ಸಿವುಕ್ಷಾ, ಏಳಲೂ ಇಲ್ಲ, ಕಣ್ಣೂ ತೆರೆಯಲಿಲ್ಲ. ಜ್ವರಗ್ರಸ್ತರಂತೆ ಅದು ಕಂಪಿಸಿತು.

ಜೋನ್ ಮೇಲೆದ್ದು ನಿಂತ. ರೊಟ್ಟಿಯ ತುಣುಕಿಗೆ ಉಪ್ಪು ಸವರಿ ಅದರ ಬಾಯಿ ಹತ್ತಿರ ಹಿಡಿದ.

"ಸಿವುಕ್ಷಾ, ಕೊಂಚ ಕಚ್ಚು ಇದನ್ನು !"

ವೃದ್ಧ ಗೋವು ಕಣ್ದೆರೆಯಿತು, ಉಪಚಾರ ಕೇಳುವಂತೆ ತನ್ನ ಒಡೆಯನನ್ನು ನೋಡಿತು, ಮತ್ತೆ ಕಣ್ಣು ಮುಚ್ಚಿತು.

ಜೋನ್ ನಿರಾಶೆಯಿಂದ ಉಸಿರ್ಗರೆದ. ಆತ ನೆಲವನ್ನು ನೋಡಿದ, ಅದು ಉಳಲ್ಪಟ್ಟಿತು, ಕಾಡಿನೆಡೆ ನೋಡಿದ, ಅದು ಮೌನವಾಗಿತ್ತು, ಬೆಲ್ಕೋವನ್ನುನೋಡಿದ, ಅದೂ ಶಾಂತವಾಗಿ ನೋಡುತ್ತಿತ್ತು, ಸೂರ್ಯನನ್ನು ನೋಡಿದ, ಆಕಾಶವನ್ನು ಭೇದಿಸಿಕೊಂಡು ಬೆಟ್ಟಗಳಾಚೆ ಆತ ಧಾವಿಸುತ್ತಿದ್ದ, ಆಗ ಗೊತ್ತಾಯಿತವನಿಗೆ, ತಾನೊಬ್ಬನೇ ಅಲ್ಲಿರುವುದು, ತನಗೆ ಯಾರಿಂದಲೂ ಎಲ್ಲಿಂದಲೂ ಸಹಾಯ ಬರುವಂತಿಲ್ಲ.

ಆತ ಮತ್ತೆ ಕಾಹಿಲೆಯ ಸಿವುಕ್ಷಾವಿನ ಕಡೆಗೆ ನೋಡಿದ.

"ಏಳು ಚಿನ್ನಾ, ಮೇಲೇಳು. ಕಾಡಿನಲ್ಲಿ ಕರಡಿಯಿದೆ ಏಳು ! ಅದು ಬಂದು ನಿನ್ನನ್ನು ನುಂಗಿ ಬಿಡುತ್ತದೆ". ಆ ಪ್ರಾಣಿಯನ್ನು ಆತ ಹೆದರಿಸತೊಡಗಿದ !

ಆಮೇಲೆ ಆತ ಬಂಡಿಯಲ್ಲಿದ್ದ ಹರಕು ಕಂಬಳಿಯನ್ನು ತೆಗೆದುಕೊಂಡು ಮುಸುಕು ಹಾಕಿಕೊಂಡು ಕಾಡಿನೊಳಗೆ ಹೊರಟ. ಅಲ್ಲಿ ನಿಂತುಕೊಂಡು ಕಂಡಿಯಂತೆ ಕಿರುಚತೊಡಗಿದ, ಕೈಕಾಲುಗಳ ಮೇಲೆ ನಡೆಯುತ್ತ ಕರಡಿಯ ಹಾಗೆ ಆ ಹಸುವಿನ ಬಳಿ ಬಂದ.

"ಬಾ ವಾ ಬಾ ವಾ" ಎಂದು ಅರಚುತ್ತ ಅದರ ಹತ್ತಿರವೇ ಬಂದ.

ಹಸು ತನ್ನ ಕಣ್ಣು ತೆರೆಯಿತು. ದೈನ್ಯತೆ ತುಂಬಿದ, ಬೇಗುದಿ ತುಂಬಿದ ತನ್ನ ಕಣ್ಣುಗಳಿಂದ ಅದನ್ನು ನೋಡುತ್ತ, ಅತ್ಯಂತ ಭೀಕರವಾದ ಭಯವೊಂದಿದೆ ಎಂದು ಕಂಡುಕೊಂಡಿತು. ಹಸು ತನ್ನ ತಲೆ

(೬ನೇ ಪುಟ ನೋಡಿ)

— ಕನ್ನಡಕ್ಕೆ —

ವೆಂಕಟರಾಜ ಪಾನಸೆ

ಪುಸ್ತಕ ಪರಿಚಯ

“ಕರ್ತವ್ಯವೇನು?”

— ಲೆನಿನ್‌ರವರ ಒಂದು ಅಮರ ಕೃತಿ —

[ಕನ್ನಡ ಅನುವಾದ ಶ್ರೀ ಕುಮಾರ ವೆಂಕಣ್ಣ. ಜನಶಕ್ತಿ ಪ್ರಕಾಶನ, ಬೆಂಗಳೂರು, ಇವರ ಪ್ರಕಟನೆ. ಪುಟ 200, ಬೆಲೆ ಒಂದು ರೂ.]

ಲೆನಿನ್‌ರವರ “ಕರ್ತವ್ಯವೇನು?” ಎಂಬ ಕೃತಿಯು, ರಷ್ಯಾದಲ್ಲಿ ಜಾರ್‌ಶಾಹಿಯನ್ನು ಇದಿರಿಸಿ ಹೋರಾಡಬಲ್ಲ, ಜಯಿಸಬಲ್ಲ, ಕಾರ್ಮಿಕವರ್ಗದ ಮಾರ್ಕ್ಸ್‌ವಾದಿ ಕ್ರಾಂತಿಕಾರಿ ರಾಜಕೀಯ ಪಕ್ಷವನ್ನು ಕಟ್ಟುವುದರಲ್ಲಿ ಮಹತ್ವಪೂರ್ಣ ಪಾತ್ರವನ್ನು ನಿರ್ವಹಿಸಿದೆ.

ಸಮಾಜವಾದೀ ಉದ್ದೇಶವಿರುವ ಕಾರ್ಮಿಕ ವರ್ಗದ ರಾಜಕೀಯ ಪಕ್ಷವು ಇತರ ಪಕ್ಷಗಳಿಗೆ ಇಲ್ಲದ ವಿಶೇಷ ಗುಣಗಳನ್ನು ಹೊಂದಿರಬೇಕು. ಅದು ಮಾರ್ಕ್ಸ್‌ವಾದೀ ಸಿದ್ಧಾಂತವನ್ನು ದೃಢವಾಗಿ ಅಥರಿಸಿಕೊಂಡಿರಬೇಕು; ಕಾರ್ಮಿಕ ವರ್ಗದ ಅತ್ಯುತ್ತಮ ಹೋರಾಟಗಾರರನ್ನು, ಒಳಗೊಂಡಿರಬೇಕು; ವಿಶಾಲ ಜನಸಮೂಹದೊಡನೆ ನಾನಾ ರೀತಿಯಲ್ಲಿ ನಿಕಟವಾದ ಸಂಪರ್ಕ ಏರ್ಪಡಿಸಿಕೊಂಡಿಸಿಕೊಂಡಿರಬೇಕು; ಅದೇ ಸಮಯದಲ್ಲಿ ಗುಪ್ತ ಪೋಲೀಸು ಮತ್ತು ಸಶಸ್ತ್ರ ಪಡೆಗಳ ದವಡೆಯೊಳಗೂ ಸುರಕ್ಷಿತವಾಗಿ ಉಳಿದುಕೊಂಡು ಎಂಥ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಾದರೂ ಕ್ರಾಂತಿಕಾರಿ ಚಳುವಳಿಯ ನೇತೃತ್ವ ವಹಿಸಬಲ್ಲ ಶಕ್ತಿಯನ್ನು ಹೊಂದಿರಬೇಕು; ದಿನದಿನದ ಸಮಸ್ಯೆಗಳ ನಿವಾರಣೆಗೆ ಹೋರಾಟಗಳನ್ನು ನಡೆಸುವುದರ ಜೊತೆಯಲ್ಲೆ ಕಾರ್ಮಿಕ ವರ್ಗದ ರಾಜಕೀಯ ಪಾತ್ರವನ್ನು ನಿರ್ವಹಿಸುವುದಕ್ಕೆ, ಅಂತಿಮ ಉದ್ದೇಶವನ್ನು ಸಾಧಿಸುವುದಕ್ಕೆ, ಹೋರಾಟವನ್ನು ಮುನ್ನಡೆಸಬೇಕು. ಇಂಥ ಪಕ್ಷವನ್ನು ನಿರ್ಮಿಸುವುದಕ್ಕೆ “ಕರ್ತವ್ಯವೇನು?” ದಾರಿ ತೋರಿಸಿಕೊಟ್ಟಿದೆ.

ಐವತ್ತು ವರ್ಷಗಳ ಹಿಂದೆ ಲೆನಿನ್‌ರವರು ಬರೆದಿರುವ “ಕರ್ತವ್ಯವೇನು?” ಇಂದು ಕೂಡ ಕಾರ್ಮಿಕ ಚಳುವಳಿಗೆ ಮಾರ್ಗದರ್ಶನ ನೀಡುವ ಕೈದೀವಿಗೆಯಾಗಿದೆ.

ವಿಮರ್ಶಕರಿಗೆ ಉತ್ತರ

ಮಾರ್ಕ್ಸ್‌ವಾದದ ಕಾಲ ಕಳೆದುಹೋಯಿತು; ಇಂದಿನ ಪರಿಸ್ಥಿತಿಗೆ ಅದು ಹೊಂದಿಕೆ ಆಗುವುದಿಲ್ಲ ಎನ್ನುವ ವಿಮರ್ಶೆಯನ್ನು ನಾವು ಆಗಾಗ ಕೇಳುತ್ತೇವೆ. ಇಂಥ ಟೀಕೆ ಲೆನಿನರ ಕಾಲದಲ್ಲೂ ನಡೆದಿತ್ತು. ಅದಕ್ಕೆ “ಕರ್ತವ್ಯವೇನು?” ಸಮರ್ಪಕ ಉತ್ತರ ಕೊಟ್ಟಿದೆ.

ಮಾರ್ಕ್ಸ್‌ವಾದವನ್ನು ಅಲ್ಲಗಳೆಯುವವರು ಸಮಾಜವಾದಿಗಳೆಂದು ಹೇಳಿಕೊಳ್ಳಬಹುದು. ಸಮಾಜವಾದೀ ಸಮಾಜ ರಚನೆಯೇ ತಮ್ಮ ಘನವಾದ ಉದ್ದೇಶವೆಂದು ಘೋಷಿಸಬಹುದು, ಆದರೆ, ಅಂಥವರು ನಿಜವಾಗಿ ಸಮಾಜವಾದದ ಮೂಲ ತತ್ವಗಳನ್ನೆ ವಿರೋಧಿಸಿ ಸಮಾಜವಾದಿ ಸಮಾಜದ ತಳಹದಿಯನ್ನೆ ಮುರಿಯಲು ಹವಣಿಸುತ್ತಾರೆ. ಅವರು ಉತ್ಪಾದನೆಯ ಉಪಕರಣಗಳ ಮೇಲೆ ಸಮಾಜದ ಸಾಮೂಹಿಕ ಒಡೆತನ ಸ್ಥಾಪಿಸುವುದನ್ನು ವಿರೋಧಿಸುತ್ತಾರೆ. ಕಾರ್ಮಿಕ ವರ್ಗದ ನೇತೃತ್ವದಲ್ಲಿ ಇಡೀ ಶೋಷಿತ ಮತ್ತು ಮರ್ದಿತ ಜನತೆಯ ಅಧಿಕಾರ ಸ್ಥಾಪಿಸುವುದನ್ನು ಖಂಡಿಸುತ್ತಾರೆ. ಬಹುಮತದ ಬಲದಿಂದ ಸರಕಾರ ನಡೆಸಲ್ಪಡುವಲ್ಲಿ ವರ್ಗ ಸಮರಕ್ಕೆ ಎಡೆಯಿಲ್ಲವೆಂದು ಬೋಧಿಸುತ್ತಾರೆ. ಅದೇ ಸಮಯದಲ್ಲಿ ಶ್ರಮಜೀವಿ ವರ್ಗದ ಮೇಲೆ ತೀವ್ರ ದಬ್ಬಾಳಿಕೆ ನಡೆಸುತ್ತಾರೆ. ಕೈತುಂಬ ನಾನಾ ತರದ ಆಯುಧಗಳನ್ನು ಇಟ್ಟುಕೊಂಡು ಶ್ರಮಜೀವಿಗಳನ್ನು ಸದೆಬಡೆಯಲು ನಿರಂತರವಾಗಿ ಹೋರಾಟ ನಡೆಸುತ್ತಿರುವ ಬಂಡವಾಳಗಾರ ವರ್ಗಕ್ಕೆ ಕಾರ್ಮಿಕ ವರ್ಗವು ಸೋತು ಶರಣಾಗತಿ ಹೊಂದಬೇಕು ಎನ್ನುವುದೇ ಈ ವಿಮರ್ಶಕರ ನಿಜವಾದ ಉದ್ದೇಶ. ಇದನ್ನು “ಕರ್ತವ್ಯವೇನು?” ಸ್ಪಷ್ಟಪಡಿಸುತ್ತದೆ.

ಬಣದೊಳಗೆ ಬಂಡಾಟ

ಕಾರ್ಮಿಕ ಚಳುವಳಿಯ ಒಳಗಡೆ ಇದ್ದುಕೊಂಡು ಕಾರ್ಮಿಕ ವರ್ಗಕ್ಕೆ ಎರಡು ಬಗೆಯುವ ಪ್ರವೃತ್ತಿಗಳನ್ನು “ಕರ್ತವ್ಯವೇನು?” ಬಯಲಿಗೆಳೆದಿದೆ. ರಷ್ಯದ ಸೋಷ್ಯಲ್ ಡೆಮಾಕ್ರೆಟಿಕ್ ಲೇಬರ್ ಪಾರ್ಟಿಯಲ್ಲಿ ಕೆಲವರು “ವಿಮರ್ಶಾ ಸ್ವಾತಂತ್ರ್ಯ”ದ ಹೆಸರಿನಲ್ಲಿ ಆ ಪಕ್ಷದ ಮಾರ್ಕ್ಸ್‌ವಾದೀ ಬುಡಕಟ್ಟಿಗೆ ಏಟು ಹಾಕುತ್ತಿದ್ದರು. ಪಕ್ಷದ ತಾತ್ವಿಕ ಹಾಗೂ ಸಂಘಟನಾತ್ಮಕ ಐಕ್ಯತೆಯನ್ನೂ ದೃಢತೆಯನ್ನೂ ಪುಡಿಮಾಡಲು ಹವಣಿಸುತ್ತಿದ್ದರು. ಅಂಥ ಹಿತಶತ್ರುಗಳ ನಿಜವಾದ ಬಣ್ಣವನ್ನು “ಕರ್ತವ್ಯವೇನು?” ಬಹಿರಂಗಪಡಿಸಿದೆ. ಬಂಡವಾಳಗಾರ ವರ್ಗದ ಅಮಾನುಷ ದಾಳಿಯನ್ನು ಪ್ರತಿಭಟಿಸಿ ಕಾರ್ಮಿಕ ವರ್ಗದ ಹಿತವನ್ನು ರಕ್ಷಿಸಬೇಕಾಗಿದ್ದ, ಅಧಿಕಾರ ಸ್ಥಾಪಿಸಬೇಕಾಗಿದ್ದ, ಪಕ್ಷದೊಳಗೆ ವರ್ಗ ಸಹಕಾರದ ಭಾವನೆಯನ್ನು ಬೆಳೆಸುವ ಇಂಥ ಪ್ರವೃತ್ತಿಗಳನ್ನು “ಕರ್ತವ್ಯವೇನು?” ಪ್ರತಿಭಟಿಸಿದೆ.

“ಆರ್ಥಿಕವಾದ” ಮತ್ತು “ಸ್ವಯಂಸ್ಫೂರ್ತಿವಾದ”

ಕಾರ್ಮಿಕ ವರ್ಗವು ಕೇವಲ ಆರ್ಥಿಕ ಕೇಳಿಕೆಗಳನ್ನು ಪಡೆಯುವ ಪ್ರಯತ್ನದಲ್ಲೇ ಮುಳುಗಿರಬಾರದು. ಕಾರ್ಮಿಕ ವರ್ಗವನ್ನು ಆರ್ಥಿಕ ಹೋರಾಟಗಳ ಚೌಕಟ್ಟಿನೊಳಗೆ ಹಿಡಿದಿಟ್ಟು, ರಾಜಕೀಯದಿಂದ ದೂರವಿರಿಸು ಕೆಲವರಲು ಪ್ರಯತ್ನಿಸುತ್ತಾರೆ. ಆರ್ಥಿಕ ಹೋರಾಟಗಳೇ ಕ್ರಮೇಣ ರಾಜಕೀಯ ಉದ್ದೇಶವನ್ನು ಈಡೇರಿಸುವುದೆಂಬ ಭಾವನೆಯನ್ನು ಅವರು ಹರಡುತ್ತಾರೆ. ಅಲ್ಲದೆ ಕಾರ್ಮಿಕ ವರ್ಗದಲ್ಲಿ ಸಮಾಜವಾದದ ತಿಳುವಳಿಕೆ ತನ್ನಿಂದ ತಾನಾಗಿ ಹುಟ್ಟಿ ಬೆಳೆಯುವುದೆಂದು ಅವರು ನಂಬುತ್ತಾರೆ. ಇದು ತಪ್ಪೆಂದು “ಕರ್ತವ್ಯವೇನು?” ತೋರಿಸಿಕೊಟ್ಟಿದೆ.

“ಶ್ರಮಶಕ್ತಿಯನ್ನು ಮಾರುವಾಗ ಯೋಗ್ಯ ಬೆಲೆ ಬರಬೇಕು ಎನ್ನುವುದಕ್ಕೋಸ್ಕರ ಮಾತ್ರ ಶ್ರಮಜೀವಿ ವರ್ಗದ ಪಕ್ಷ ಇರುವುದಲ್ಲ. ಶ್ರಮಶಕ್ತಿಯನ್ನು ಮಾರುವ ಪದ್ಧತಿಯನ್ನೇ ಅಳಿಸುವುದು ಆ ಪಕ್ಷದ ಗುರಿ. ಕಾರ್ಮಿಕ ವರ್ಗದ ಪಕ್ಷವು ದುಡಿಯುವ ವರ್ಗವು ಧನಿಕ ವರ್ಗದ ಅಸಹನೀಯ ಗುಲಾಮಗಿರಿಗೆ ಒಳಗಾಗಿರುವ ಸ್ಥಿತಿಯನ್ನು ಕೊನೆಗಾಣಿಸುವುದಕ್ಕೆ ಕಾರ್ಮಿಕ ವರ್ಗದ ಸಂಘಟಿತ ನೇತೃತ್ವವಾಗಿ ವರ್ತಿಸಬೇಕು” ಎಂದು ಲೆನಿನ್ ಹೇಳಿದ್ದಾರೆ.

ನಿಜವಾದ ಸಮಾಜವಾದಿಯು ಕೇವಲ ಟ್ರೇಡ್ ಯೂನಿಯನ್ ಕಾರ್ಯದರ್ಶಿಯಲ್ಲ; ಅವನು ಇಡೀ ಜನತೆಯ ಪ್ರತಿನಿಧಿ. ಕಾರ್ಮಿಕವರ್ಗವು ಕೇವಲ ತನ್ನ ಸ್ಥಿತಿ, ತನ್ನ ಹಿತ, ತನ್ನ ತಾತ್ಕಾಲಿಕ ಕೇಳಿಕೆ, ಅಷ್ಟನ್ನೆ ಹಗಲಿರುಳು ಎಣಿಸುತ್ತಿದ್ದರೆ ಸಾಲದು. ಕಾರ್ಮಿಕ ವರ್ಗವು ಮಾರ್ಕ್ಸ್‌ವಾದದ ಬೆಳಕಿನಲ್ಲಿ ಇಡೀ ಸಮಾಜದ, ಇಡೀ ರಾಜ್ಯದ, ಇಡೀ ಜಗತ್ತಿನ ಸ್ಥಿತಿಗತಿಗಳನ್ನು ತಿಳಿಯಬೇಕು; ಸುಲಿಗೆ ದಬ್ಬಾಳಿಕೆಗಳಿಗೆ ಒಳಗಾಗಿ ನರಳುವ ಸಮಗ್ರ ಜನತೆಯ ವಿಮೋಚನೆಗೆ ನಡೆಯುವ ಹೋರಾಟದಲ್ಲಿ ಮುಂದಾಳ್ತನ ವಹಿಸಬೇಕು; ಜಗತ್ತನ್ನು ಸಮಾಜವಾದದ ಮಾರ್ಗದಲ್ಲಿ ಪರಿವರ್ತನೆಗೊಳಿಸಬೇಕು ಎಂದು “ಕರ್ತವ್ಯವೇನು?” ಸಾರುತ್ತದೆ.

ಕಾರ್ಮಿಕ ಚಳುವಳಿಯು, ಏನೋ ಕಾರಣದಿಂದ ಹೇಗೋ ನಡೆಯುವ ಘಟನೆಗಳನ್ನು ಹಿಂಬಾಲಿಸಿಕೊಂಡು ನಡೆದರೆ ಅದರ ಉದ್ದೇಶ ಫಲಿಸಲಾರದು. ಬದಲಾಗಿ, ಆ ಘಟನೆಗಳ ಸುಳಿಯಲ್ಲಿ ಕಾರ್ಮಿಕ ವರ್ಗಕ್ಕೆ ಧಕ್ಕೆಯಾಗುವುದು. ಪರಿಸ್ಥಿತಿಯ ಅವಶ್ಯಕತೆಗಳಿಗಿಂತ ಹಿಂದುಳಿದಿರುವುದು, ನಡೆಯಲಿರುವ ಹೋರಾಟಕ್ಕೆ ತಯಾರಾಗದೆ ಉಳಿದಿರುವುದು, ಸಮಾಜದಲ್ಲಿ ಎಡೆಬಿಡದೆ ನಡೆಯುತ್ತಿರುವ ತಾತ್ವಿಕ, ರಾಜಕೀಯ, ಸಾಮಾಜಿಕ ಹೋರಾಟಗಳಲ್ಲಿ ಆಸಕ್ತಿ ವಹಿಸದೆ ತನ್ನ ಚಿಪ್ಪಿನೊಳಗೆ ಹುದುಗಿರುವುದು ತಪ್ಪೆಂದು ಲೆನಿನ್ ತೋರಿಸಿಕೊಟ್ಟಿದ್ದಾರೆ. ತನ್ನಿಂದ ತಾನಾಗಿ ಏನಾದರೂ ಆಗಲಿ, ಆಗ ನೋಡಿಕೊಳ್ಳೋಣ, ಎಂದು ಹಾರೈಸಿ ಕುಳಿತರೆ ಆಗತಕ್ಕ ಕಾರ್ಯ ಎಂದೂ ಆಗಲಾರದು. ಕಾರ್ಮಿಕ ವರ್ಗದ ರಾಜಕೀಯ ಪಕ್ಷವು ಮುಂದಾಳ್ತನ ವಹಿಸುತ್ತಿರಬೇಕು ಎಂದು ಲೆನಿನ್ ಬೋಧಿಸಿದ್ದಾರೆ.

ತತ್ವದ ಮಹತ್ವ

ಕಾರ್ಮಿಕ ವರ್ಗದ ಚಳುವಳಿಯಲ್ಲಿ ತತ್ವದ ಮಹತ್ವಪೂರ್ಣ ಪಾತ್ರವನ್ನು “ಕರ್ತವ್ಯವೇನು?” ಎತ್ತಿ ತೋರಿಸಿದೆ. “ನಮಗೆ ಇಂದು ಎರಡೇ ದಾರಿಗಳಿರುವುದು. ಒಂದೋ ನಾವು ಬಂಡವಾಳಶಾಹೀ ತಾತ್ವಿಕ ಮಾರ್ಗವನ್ನು ಅನುಸರಿಸಬೇಕು. ಅಲ್ಲವಾದರೆ ಸಮಾಜವಾದೀ ತಾತ್ವಿಕ ಮಾರ್ಗವನ್ನು ಹಿಡಿಯಬೇಕು. ನಡುದಾರಿ ಬೇರೊಂದಿಲ್ಲ........ ಆದುದರಿಂದ ಸಮಾಜವಾದೀ ತಾತ್ವಿಕ ಮಾರ್ಗವನ್ನು ಬಿಟ್ಟು ಎಳ್ಳಷ್ಟೂ ಕದಲಿದರೆ ಬಂಡವಾಳಶಾಹಿ ತಾತ್ವಿಕ ಮಾರ್ಗಕ್ಕೆ ಕಾಲಿಟ್ಟಂತೆಯೇ ಆಗುವುದು” ಎಂದು ಲೆನಿನ್ ಹೇಳಿದ್ದಾರೆ.

ತಾತ್ವಿಕ ವಿಚಾರದಲ್ಲಿ ಕಾರ್ಮಿಕವರ್ಗ ಮತ್ತದರ ರಾಜಕೀಯ ಪಕ್ಷ ಅಷ್ಟೊಂದು ಆಸಕ್ತಿ ಏಕೆ ವಹಿಸಬೇಕೆಂದು ಲೆನಿನ್ ವಿವರಿಸಿದ್ದಾರೆ. ಬಂಡವಾಳಶಾಹೀ ತಾತ್ವಿಕ ವಿಚಾರ ಸರಣಿಯು ಸಮಾಜವಾದಕ್ಕಿಂತ ಹೆಚ್ಚು ಪುರಾತನವಾದುದು. ಅದು ಹೆಚ್ಚು ವಿಕಾಸಹೊಂದಿದೆ, ಹಬ್ಬಿದೆ, ಬೇರೂರಿದೆ. ನಾಲ್ಕೂ ಕಡೆ ಹಬ್ಬುವುದಕ್ಕೆ ಅದಕ್ಕೆ ಬೇಕಾದಷ್ಟು ಅನುಕೂಲತೆಗಳಿವೆ. ಕಾರ್ಮಿಕ ವರ್ಗವು ಸ್ವಯಂ ಸ್ಫೂರ್ತಿಯಿಂದ ಸಮಾಜವಾದದ ಕಡೆಗೆ ಆಕರ್ಷಿಸಲ್ಪಡುತ್ತದೆ, ನಿಜ. ಅದು ಸ್ವಾಭಾವಿಕ. ಯಾಕೆಂದರೆ ಸಮಾಜವಾದವು ಕಾರ್ಮಿಕ ವರ್ಗದ ಬಡತನ ಮತ್ತು ಶೋಷಣೆಗೆ ಮತ್ತೆಲ್ಲ ಸಿದ್ಧಾಂತಗಳಿಗಿಂತಲೂ ಹೆಚ್ಚು ಸಮರ್ಪಕವಾದ ಕಾರಣಗಳನ್ನು ತಿಳಿಸುತ್ತದೆ; ಅವುಗಳ ನಿವಾರಣೆಗೆ ಯೋಗ್ಯ ಮಾರ್ಗವನ್ನು ತೋರಿಸುತ್ತದೆ. ಆದುದರಿಂದ ಸಮಾಜವಾದೀ ಸಿದ್ಧಾಂತವನ್ನು ಕಾರ್ಮಿಕರು ಸುಲಭವಾಗಿ ಅರ್ಥಮಾಡಿಕೊಳ್ಳಬಲ್ಲರು. ಆದರೆ, ಸಮಾಜವಾದವು ಸ್ವಯಂಸ್ಫೂರ್ತಿಯ ಮುಂದೆ ತಲೆಬಾಗದಿರಬೇಕು. ಸಮಾಜವಾದಕ್ಕಿಂತಲೂ ವಿಶಾಲವಾಗಿ ಹಬ್ಬಿರುವ ಮತ್ತು ಆಳವಾಗಿ ಬೇರುಬಿಟ್ಟಿರುವ ಬಂಡವಾಳಶಾಹಿ ತಾತ್ವಿಕ ವಿಚಾರ ಸರಣಿಯು ಕಾರ್ಮಿಕ ವರ್ಗವನ್ನು ಸುತ್ತುವರಿದು ಕೆಡಿಸದಂತೆ ಮುನ್ನೆಚ್ಚರಿಕೆಯಿಂದಲೂ ಚೈತನ್ಯದಿಂದಲೂ ವರ್ತಿಸಬೇಕು. ಲೆನಿನ್ ಇದನ್ನು ಒತ್ತಿ ಹೇಳಿದ್ದಾರೆ.

“ಕ್ರಾಂತಿಕಾರಿ ತತ್ವವಿಲ್ಲದೆ ಕ್ರಾಂತಿಕಾರಿ ಚಳುವಳಿ ನಡೆಯಲಾರದು........ಎಲ್ಲದಕ್ಕಿಂತ ಉನ್ನತವಾದ ಮಾರ್ಗದರ್ಶಕ ಸಿದ್ಧಾಂತವಿರುವ ಪಕ್ಷವೇ ಎಲ್ಲರಿಗಿಂತ ಮುಂಚೂಣಿಯದಲ್ಲಿ ಹೋರಾಡುವ ಪಾತ್ರವನ್ನು ನಿರ್ವಹಿಸಬಲ್ಲುದು” ಎಂದು ಲೆನಿನ್ ಸ್ಪಷ್ಟಗೊಳಿಸಿದ್ದಾರೆ.

ಕೃತಿ ಬಹಳ ಮುಖ್ಯ

ಕಾರ್ಮಿಕ ವರ್ಗದ ಪಕ್ಷವು ಉನ್ನತ ಸಿದ್ಧಾಂತವನ್ನು ಒಪ್ಪಿಕೊಂಡಿದ್ದರೆ ಸಾಲದು; ಅದನ್ನು ಅನುಸರಿಸಿ ಕಾರ್ಯಮಾಡಲು ಶಕ್ತಿಹೊಂದಿರಬೇಕು; ಅದಕ್ಕೋಸ್ಕರ ಪಕ್ಷದ ಸದಸ್ಯರು ಪಕ್ಷದ ಸಿದ್ಧಾಂತ ಮತ್ತು ಧೋರಣೆಗಳನ್ನು ಒಪ್ಪಿಕೊಂಡಿದ್ದರೆ ಸಾಲದು, ಪಕ್ಷದ ಶಿಸ್ತಿಗೆ ಒಳಪಟ್ಟು, ತೀರ್ಮಾನವನ್ನು ಕಾರ್ಯಗತಗೊಳಿಸಲು ಪ್ರಾಯೋಗಿಕವಾಗಿ ದುಡಿಯುವಂತಹರಿರಬೇಕು. ಕಾರ್ಮಿಕ ವರ್ಗದ ಪಕ್ಷವು ಎಲ್ಲದಕ್ಕಿಂತ ಮಿಗಿಲಾಗಿ ಮುಂಚೂಣಿಯ ಹೋರಾಟಗಾರರ, ಅವಿಶ್ರಾಂತ ಕಾರ್ಯಕರ್ತರ, ಸಂಘಟನೆಯಾಗಿರಬೇಕು ಎಂದು “ಕರ್ತವ್ಯವೇನು?” ವಿವರಿಸುತ್ತದೆ.

ಕನ್ನಡ ಅನುವಾದವು ಮೂಲ ಕೃತಿಯಷ್ಟು ಸರಳವಾಗಿಲ್ಲ. ಅನುವಾದಕರು ಸ್ವಲ್ಪ ಶ್ರಮವಹಿಸಿದ್ದಲ್ಲಿ ಮೂಲ ಕೃತಿಯ ಭಾವವನ್ನು ತರುವುದು ಸಾಧ್ಯವಿತ್ತು. ಅನುವಾದ ಅಲ್ಲಲ್ಲಿ ಕ್ಲಿಷ್ಟವಾಗಿದ್ದು, ಸಮರ್ಪಕವಾಗಿಲ್ಲದಿದ್ದರೂ, ಇದು ಪ್ರತಿಯೊಬ್ಬರೂ ಓದಲೇ ಬೇಕಾದ ಕೃತಿ.

—“ಆನಂದ”

ಬಿಜಾಪುರ ಜಿಲ್ಲೆಯಿಂದ ಅಕ್ಕಿಯು ಕಳ್ಳ ಸಾಗಾಟ

ಅಧಿಕಾರಿಗಳಿಗೆ ಕಾಂಗ್ರೆಸ್ ಎಂ. ಎಲ್. ಎ.ಗಳ ಬೆದರಿಕೆ

ಆಂಧ್ರ, ಮದ್ರಾಸ್, ಕೇರಳ ಮತ್ತು ಮೈಸೂರು ಪ್ರಾಂತಗಳನ್ನೊಳಗೊಂಡ ದಕ್ಷಿಣ ವಲಯು ಎಂದು ರಚನೆ ಮಾಡಿ, ಈ ನಾಲ್ಕು ಪ್ರಾಂತಗಳಿಂದ ಇತರ ಪ್ರಾಂತಗಳಿಗೆ ಅಕ್ಕಿಯು ನಿರ್ಯಾತವಾಗಬಾರದೆಂದು ಕೇಂದ್ರ ಸರಕಾರವು ನಿರ್ಣಯಿಸಿತ್ತು. ತಮ್ಮ ಜಿಲ್ಲೆಗಳಿಂದ ವ್ಯಾಪಾರಸ್ಥರು ಪರಪ್ರಾಂತಕ್ಕೆ ಅಕ್ಕಿ ಸಾಗಾಟ ಮಾಡದಂತೆ ಯೋಗ್ಯ ವ್ಯವಸ್ಥೆ ಮಾಡಬೇಕೆಂದು ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿದೆ. ಆದರೆ ಸರಹದ್ದಿನ ಜಿಲ್ಲೆಗಳಿಂದ ಸಾಕಷ್ಟು ಅಕ್ಕಿ ಸರಕಾರಿ ಆಜ್ಞೆಯನ್ನುಲ್ಲಂಘಿಸಿ ಪರಪ್ರಾಂತಕ್ಕೆ ಕಳ್ಳರೀತಿಯಿಂದ ಹೋಗುತ್ತದೆಂಬುದರಲ್ಲಿ ಸಂಶಯವಿಲ್ಲಿ.

ಬಿಜಾಪುರ ಜಿಲ್ಲೆಯು ಮುಂಬಯಿ ರಾಜ್ಯದ ಸರಹದ್ದಿಯಲ್ಲಿದೆ. ಜಿಲ್ಲೆಯ ಅರ್ಧದಷ್ಟು ಸೀಹದ್ದು ಮುಂಬಯಿ ಪ್ರಾಂತದ ಗಡಿಯಿಂದ ಸುತ್ತುವರಿಯಲ್ಪಟ್ಟಿದೆ. ಬಿಜಾಪುರ ಜಿಲ್ಲೆಯಿಂದ ಕಳೆದ 2–3 ತಿಂಗಳುಗಳಲ್ಲಿ 50,000 ಮೇಲ್ಪಟ್ಟು ಅಕ್ಕಿ ಚೀಲಗಳು ಕಳ್ಳರೀತಿಯಿಂದ ಬಿಜಾಪುರ ಗಡಿದಾಟಿ, ಮುಂಬಯಿ ಪ್ರಾಂತವನ್ನು ಸೇರಿವೆಂದು ತಿಳಿದುಬರುತ್ತದೆ. ಲೈಸೆನ್ಸಗಳನ್ನು ಪಡೆದ ವ್ಯಾಪಾರಸ್ಥರು, ತಮ್ಮ ಕೋಟಾಗಿಂತಲೂ ಹೆಚ್ಚಿಗೆ ಅಕ್ಕಿ ತರಿಸುತ್ತಿರುವರೆಂದೂ, ಪೋಲೀಸ ಖಾತೆಯ ಸಹಾಯದಿಂದ, ಅಕ್ಕಿಯನ್ನು ಮುಂಬಯಿ ಪ್ರಾಂತಕ್ಕೆ ಕಳುಹಿಸಲಾಗುತ್ತಿದೆಂದೂ ತಿಳಿದುಬರುತ್ತದೆ.

ಒಬ್ಬ ಕಾಂಗ್ರೆಸ ಎಂ. ಎಲ್. ಎ. ಮತ್ತು ಜಿಲ್ಲೆಯ ಒಬ್ಬ ಪೋಲೀಸ ಅಧಿಕಾರಿ, ಕೆಲವು ಪೋಲೀಸರ ಸಹಾಯದಿಂದ ಈ ಕಳ್ಳ ಸಾಗಾಟಕ್ಕೆ ಬೆಂಬಲ ಕೊಡುತ್ತಿರುವರೆಂದು, ಸಾವಿರಾರು ರೂಪಾಯಿ ಲಂಚ ಕೊಟ್ಟು ಈ ಕೆಲಸ ಇಂದಿನ ತನಕ ಯಾವುದೇ ಆತಂಕವಿಲ್ಲದೆ ನಡೆದಿತ್ತೆಂದೂ ತಿಳಿದುಬರುತ್ತದೆ. ಅಕಸ್ಮಾತ್ತಾಗಿ ಈ ಗುಟ್ಟುರಟ್ಟಾಗಲು ಹೋದ ತಿಂಗಳ ಕೊನೆಗೆ ಡಿ.ವೈ.ಎಸ್.ಪಿ.ಯವರು ಸರಹದ್ದಿನಲ್ಲಿಯ ಕೆಲವೆಡೆಗಳಲ್ಲಿ ಕಳ್ಳ ಸಾಗಾಟದ ಸಾವಿರಾರು ಚೀಲ ಅಕ್ಕಿಯನ್ನು ಹಿಡಿದಿರುವರು. ಆಗ ಈ ಕಳ್ಳ ಸಾಗಾಟದಲ್ಲಿ ವ್ಯಾಪಾರಸ್ಥರ ಮತ್ತು ಪೋಲೀಸರ ಸಂಬಂಧವಿದ್ದದ್ದು ಕಂಡುಬಂತು.

ಒಂದು ಕಡೆ ಅಕ್ಕಿ ಕಳ್ಳರೀತಿಯಿಂದ ಟ್ರಕ್ಕಿನಲ್ಲಿ ಒಯ್ಯುತ್ತಿದ್ದಾಗ, ಆ ಟ್ರಕ್ಕು ಹಳ್ಳದಲ್ಲಿ ಸಿಕ್ಕಿಕೊಳ್ಳಲು, ಕೆಲವು ಪೋಲೀಸರಿಗೆ ಇದು ಪತ್ತೆಹತ್ತಿದ ಕೂಡಲೇ, ಆ ಸ್ಥಳಕ್ಕೆ ಹೋಗಿ, ಅಕ್ಕಿ ಸಾಗಿಸುವ ಲೈಸೆನ್ಸ ಎಲ್ಲಿದೆಂದು ಕೇಳಲು ಒಬ್ಬ ಕಾಂಗ್ರೆಸ ಎಂ. ಎಲ್. ಎ ಯವರು "ನಾನು ಎಂ. ಎಲ್. ಎ. ಇದ್ದೇನೆ. ನೀನು ಯಾರು ನನಗೆ ಕೇಳುವವನು" ಎಂದು ಬೆದರಿಸಿದರಂತೆ. ಎರಡು ದಿವಸ ಆ ಟ್ರಕ್ಕು ಹಳ್ಳದಲ್ಲಿಯೇ ನಿಂತಿದ್ದು, ಅದಕ್ಕೆ ಕೈಹಚ್ಚಲಿಕ್ಕೆ ಯಾರಿಂದಲೂ ಧೈರ್ಯವಾಗಲಿಲ್ಲವಂತೆ. ಜನರ ಸೇವೆಗಾಗಿ ಆರಿಸಿ ಹೋಗುವ ಎಂ. ಎಲ್. ಎ.ಗಳು ಲಾಭಬಾಸಿಯಿಂದ, ತಾವೇ ಕಳ್ಳ ವ್ಯಾಪಾರದಲ್ಲಿ ಮುಂದಾಳುತ್ವ ವಹಿಸುತ್ತಿರುವದಷ್ಟೇ ಅಲ್ಲ, ತಮ್ಮದೇ ಆದ ಸರಕಾರದ ನೌಕರರನ್ನು ಬೆದರಿಸುತ್ತಿರುವುದನ್ನು ನೋಡುವಾಗ "ಇದೆಂಥ ನರಭಕ್ಷಕ ಎಂ. ಎಲ್. ಎ.ಗಳು ಆರಿಸಿ ಹೋದರಪ್ಪಾ", ಎಂದು ಜನರು ಉಸಿರುಬಿಡುತ್ತಿರುವರು. ತಾವೇ ಮಾಡಿರುವ ಕಾಯಿದೆಗಳನ್ನು ತಾವೇ ಮುರಿಯುತ್ತಿರುವ ಈ ಎಂ. ಎಲ್. ಎ.ಗಳ ದೇಶಪ್ರೇಮ ಎಷ್ಟು ಆಳವಾಗಿರಬೇಕು ?

ಹೀಗೆ ಜಿಲ್ಲೆಯಿಂದ ಸಾವಿರಾರು ಚೀಲ ಅಕ್ಕಿ ಕಳ್ಳಸಾಗಾಟವಾಗುತ್ತಿರುವುದನ್ನು ನೋಡಿ, ಜಿಲ್ಲಾ ಕಲೆಕ್ಟರರು ಸಂಶಯಿತ ವ್ಯಾಪಾರಸ್ಥರ ಲೈಸೆನ್ಸ ರದ್ದು ಮಾಡಿರುವರು ಮತ್ತು ಕೆಲವು ಪೋಲೀಸರ ಮೇಲೆ ಕ್ರಮತೆಗೆದುಕೊಂಡು ಸರಹದ್ದಿನಲ್ಲಿ ಯೋಗ್ಯ ಪೋಲೀಸ ಬಂದೋಬಸ್ತ ಮಾಡಿರುವರು. ಆದರೆ ಈ ಕಳ್ಳಸಾಗಾಟಕ್ಕೆ ಹೆಚ್ಚಿನ ಸಹಾಯ ಮಾಡುತ್ತಿರುವ ಪ್ರಮುಖ ಪೋಲೀಸ ಅಧಿಕಾರಿಯ ಮೇಲೆ ಯಾವದೇ ಕ್ರಮವನ್ನಿನ್ನೂ ತೆಗೆದುಕೊಳ್ಳಲಿಲ್ಲವಂತೆ. ಇದರಿಂದಾಗಿ ಜಿಲ್ಲೆಯ ಪೋಲೀಸ ಖಾತೆಯಲ್ಲಿ ಎರಡು ಬಣಗಳಾಗಿವೆಯಂತೆ. ಒಂದು ಗುಂಪು ಕಳ್ಳವ್ಯಾಪಾರಕ್ಕೆ ಸಹಾಯಮಾಡುವವರು ಮತ್ತೊಂದು ಗುಂಪು ಈ ವ್ಯವಹಾರವನ್ನು ಹಿಡಿದುಕೊಡುವವರು. ಮೇಲಧಿಕಾರಿಗಳು ಇದರ ಕುರಿತು ಕೂಡಲೇ ವಿಚಾರಣೆ ನಡೆಸುವುದು ಅತ್ಯಗತ್ಯವೆಂದು ಜನರು ಹೇಳುತ್ತಿರುವರು.

ಪ್ರಮುಖ ಅಕ್ಕಿಯ ವ್ಯಾಪಾರಸ್ಥರ, ಅದರಲ್ಲೂ ಕಾಂಗ್ರೆಸ್ ಎಂ. ಎಲ್. ಎ. ಮತ್ತು ಇತರ ಕಾಂಗ್ರೆಸ್ ವ್ಯಾಪಾರಿಗಳ ಲೈಸೆನ್ಸಗಳನ್ನು ಕಲೆಕ್ಟರರು ರದ್ದು ಮಾಡಿರುವುದರಿಂದ ಸಿಟ್ಟಿಗೊಂಡು, ಪಂಡರಪುರ ಸರ್ವೋದಯ ಸಮ್ಮೇಳನಕ್ಕೆ ಬಂದಿದ್ದ ಮೈಸೂರ ಮುಖ್ಯ ಮಂತ್ರಿ ಶ್ರೀ ಬಿ. ಡಿ. ಜತ್ತಿಯವರಲ್ಲಿಗೆ, ಇವರೆಲ್ಲ ಒಂದು ಶಿಷ್ಟಮಂಡಲವನ್ನೊಯ್ದು, ಕಲೆಕ್ಟರರ ವಿರುದ್ಧ ತಕ್ರಾರು ಮಾಡಿ, ಕಲೆಕ್ಟರರು ಬಹಳ ನಿಷ್ಠುರರಾಗಿರುವರೆಂದೂ, ಅವರು ರದ್ದು ಮಾಡಿರುವ ಲೈಸೆನ್ಸಗಳನ್ನು ತಮಗೆ ಕೊಡಿಸಬೇಕೆಂದೂ ಮತ್ತು ಕಲೆಕ್ಟರರನ್ನು ಈ ಜಿಲ್ಲೆಯಿಂದ ಬದ್ಲಿ ಮಾಡಬೇಕೆಂದೂ, ತಮ್ಮ ಸಂಕಷ್ಟವನ್ನೆಲ್ಲ ತೋಡಿಕೊಂಡರೆಂದು ವದಂತಿಯಿದೆ.

"ಕಲೆಕ್ಟರರ ಹುಕುಮಿನ ವಿರುದ್ಧ ನೀವು ಬೆಂಗಳೂರಿಗೆ ಬಂದು ಅಪೀಲು ಮಾಡಿರೆಂದು" ಶ್ರೀ ಜತ್ತಿಯವರು ಹೇಳಿದರೆಂದು ಕೆಲವರು ಹೇಳುತ್ತಿರುವರು. "ನಾನು ಇದರಲ್ಲಿ ಕೈ ಹಾಕುವುದಿಲ್ಲ. ನೀವು ಹೆಚ್ಚಿಗೆ ಒತ್ತಾಯ ಮಾಡಿದರೆ ನಾನು ರಾಜಿನಾಮೆ ಕೊಡುತ್ತೇನೆ'' ಎಂದು ಹೇಳಿದರೆಂದೂ ಕೆಲವರು ಹೇಳುತ್ತಿರುವರು. ಆದರೆ ತಮ್ಮಲ್ಲಿಗೆ ಬಂದ ಶಿಷ್ಟಮಂಡಲಕ್ಕೆ ಶ್ರೀ ಜತ್ತಿಯವರು ಏನು ಉತ್ತರ ಕೊಟ್ಟರೆಂದು ಅವರೇ ಹೇಳಬೇಕು. ಇದು ಕೇಂದ್ರ ಸರಕಾರದ ಪ್ರಶ್ನೆಯಾದುದರಿಂದ, ಶ್ರೀ ಜತ್ತಿಯವರು ಇದರಲ್ಲಿ ಕೈಹಾಕಲಿಕ್ಕಿಲ್ಲೆಂದೂ ಕೆಲವರು ಹೇಳುತ್ತಿರುವರು.

ಆಂಧ್ರದಿಂದ ಅಗ್ಗ ದರದಲ್ಲಿ ಅಕ್ಕಿಯನ್ನು ತರಿಸಿ ಮುಂಬಯಿ ಪ್ರಾಂತದಲ್ಲಿ ತುಟ್ಟಿಯಾಗಿ ಮಾರುವ ಕಳ್ಳ ವ್ಯಾಪಾರ ಸಂಪೂರ್ಣವಾಗಿ ತಡೆಹಿಡಿಯಲ್ಪಡಬೇಕಾದರೆ ಸರಕಾರದವರು ಗಡಿಪ್ರದೇಶಗಳಲ್ಲಿ ಇನ್ನೂ ಹೆಚ್ಚಿನ ಪೋಲೀಸ ಕಾವಲುಗಳನ್ನಿಡಬೇಕು. ಆಯಾ ಜಿಲ್ಲೆಗೆ ಸಾಕಾಗುವಷ್ಟೇ ಅಕ್ಕಿ ತರಿಸಲು ವ್ಯಾಪಾರಸ್ಥರಿಗೆ ಲೈಸೆನ್ಸ ಕೊಡಬೇಕು. ಮತ್ತು ಜನತೆಯೂ ಈ ಕಳ್ಳ ಸಾಗಾಟಗಾರರನ್ನು ಹಿಡಿಯಲು ಹೆಚ್ಚಿನ ಪ್ರಯತ್ನ ಮಾಡಬೇಕು.

ಬಿಜಾಪುರ ಜಿಲ್ಲೆಯಲ್ಲಿ ಅಕ್ಕಿಯ ಕಳ್ಳ ಸಾಗಾಟ ನಿಲ್ಲಿಸಲ್ಪಟ್ಟರೆ ಜನರಿಗೆ ಅಗ್ಗದರದಿಂದ ಅಕ್ಕಿ ಸಿಗುವುದರಲ್ಲಿ ಸಂಶಯವಿಲ್ಲ.

ಅಕ್ಕಿಯ ಕಳ್ಳಸಾಗಾಟವನ್ನು ಹತ್ತಿಕ್ಕಲು ಸರಕಾರದವರು ಉಗ್ರ ಕ್ರಮ ಕೈಗೊಳ್ಳುವುದು ಅತ್ಯಗತ್ಯ.

ಎಸ್. ಕೆ. ಉಪಾಧ್ಯಾಯ
ಬಿಜಾಪುರ

ನೀವೇನು ಹೇಳುತ್ತೀರಿ ?

ಕೆಲವು ವಾರಗಳ ಹಿಂದೆ ರಾಷ್ಟ್ರಾಧ್ಯಕ್ಷರು ಕಾಂಗ್ರಾ ಜಿಲ್ಲೆಯ ತಾಂಡಾದಲ್ಲಿ ಟಿ. ಬಿ ಸ್ಯಾನಟೋರಿಯಂನ (ಕ್ಷಯ ರೋಗಿಗಳ ಆಸ್ಪತ್ರೆ) ಆರಂಭೋತ್ಸವ ನಡೆಸಿದರು.

ಜಂಗಲ್ ಗುತ್ತಿಗೆದಾರರಾದ ರಾಯ ಬಹದ್ದೂರ್ ಜೋಧ ಮಲ್ಲಿ ಕುಥಿಲಾಲ್ ಅವರು 4 ಲಕ್ಷ ರೂಪಾಯಿಗಳ ದಾನವಿತ್ತು 83 ಹಾಸಿಗೆಗಳ ಈ ಆಸ್ಪತ್ರೆಯನ್ನು ಕಟ್ಟಿದ್ದಾರೆ. ರಾಷ್ಟ್ರಾಧ್ಯಕ್ಷರು ಸ್ವಾಭಾವಿಕವಾಗಿಯೇ ಇದನ್ನು ಹೊಗಳಿ "ಎಲ್ಲರೂ ಇಂಥ ಆದರ್ಶವನ್ನನುಸರಿಸಬೇಕು" ಎಂದು ಕೇಳಿಕೊಳ್ಳುವದೂ ಸ್ವಾಭಾವಿಕವೇ ಆಗಿತ್ತು.

ಅತ್ಯಂತ ಬಡತನದಲ್ಲಿ ನರಳುವ ಹಾಗೂ ಕ್ಷಯ ರೋಗಕ್ಕೆ ಹೆಚ್ಚಾಗಿ ಬಲಿಯಾಗುವ ಕಾಂಗ್ರಾ ಬೆಟ್ಟದ ಜನಗಳು ರಾಷ್ಟ್ರಾಧ್ಯಕ್ಷರ ಆಗಮನಕ್ಕೆ ಸಂತೋಷಪಟ್ಟರು.

ಆದರೆ ಇದರಲ್ಲಾದುದೇನು ?

- ಸುಮಾರು 80 ಮೈಲಿ ದೂರದಲ್ಲಿರುವ ಹೋಶಿಯಾರಪುರದಿಂದ ದೊಡ್ಡ ದೊಡ್ಡ ಜಮಖಾನೆಗಳನ್ನು ಕುಲಿಯಾಳಿ ಜನಗಳು ಹೊತ್ತು ತಂದಿದ್ದರು.
- ಪಠಾಣಕೋಟೆಯಲ್ಲಿ ಏರ್ಪಾಡಾಗಿದ್ದ ಸೊಗಸಾದ ಭೋಜನ ಕೂಟಕ್ಕೆ ಸುಮಾರು 20 ಸಹಸ್ರ ರೂಪಾಯಿಗಳ ವೆಚ್ಚವಾಯಿತು.
- ರಾಷ್ಟ್ರಪತಿಗಳ ಕಾರು ಬೆಳಗಿನ 9 ಗಂಟೆಗೆ ತಾಂಡಾ ತಲುಪಿತ್ತು. 10–45ಕ್ಕೆ ಪಠಾಣ ಕೋಟೆಯನ್ನು ತಲುಪಿತು. ಒಟ್ಟು 105 ನಿಮಿಷಗಳ ಭೇಟಿಗೆ 1,500 ಜನ ಪೋಲೀಸ್ ಬಂದೋಬಸ್ತನ್ನು ಪಂಜಾಬ್ ಪ್ರಾಂತ್ಯದಲ್ಲೆಲ್ಲ ವ್ಯವಸ್ಥೆಗೊಳಿಸಲಾಗಿತ್ತು.
- ಈ ಪೋಲೀಸ್ ಜನರು ಮೇ 15ರಂದು (ಕಾರ್ಯಕ್ರಮದ ದಿನಕ್ಕಿಂತ 6 ದಿನ ಮೊದಲು) ಚಲನವಲನಕ್ಕೆ ತೊಡಗಿದರು. (ಇವರು ಮೇ 23ರ ಸುಮಾರಿಗೆ ತಮ್ಮ ಮೊದಲಿನ ಸ್ಥಳಗಳಿಗೆ ತಲುಪಿದರು) ಇದರಿಂದಾದ ವೆಚ್ಚ ಸುಮಾರು 3 ಲಕ್ಷ ರೂಪಾಯಿಗಳು.

ಆದರೆ—

ಪಂಜಾಬ್ ರಾಜ್ಯದಲ್ಲಿ ಈಗ ಕ್ಷಯ ರೋಗಿಗಳಿಗಾಗಿ ಒಂದು ಸಹಸ್ರ ಹಾಸಿಗೆಗಳಿವೆ ಮತ್ತು ದಾಖಲಾಗುವ ಕ್ಷಯ ರೋಗಿಗಳ ಸಂಖ್ಯೆ ಸುಮಾರು 12 ಸಹಸ್ರ ಇದೆ. ಪರಿಸ್ಥಿತಿ ಹೀಗಿದ್ದರೂ ಪಂಜಾಬ ಸರ್ಕಾರಕ್ಕೆ ಈ ಕ್ಷಯ ರೋಗಿಗಳ ಬಗ್ಗ ಯೋಜನೆಯೊಂದಿತ್ತು. ಇವರಲ್ಲಿ ಸುಮಾರು 10 ಸಹಸ್ರ ಜನ ರೋಗಿಗಳು ಮನೆಯಲ್ಲಿದ್ದುಕೊಂಡೇ ಚಿಕಿತ್ಸೆ ಪಡೆಯುವಂಥ ಯೋಜನೆ ಅದು. ಆದರೆ ಇದಕ್ಕೆ 3 ಲಕ್ಷ ರೂಪಾಯಿಗಳ ಖರ್ಚು ಬರುವದೆಂದು ಪಂಜಾಬ ಸರಕಾರ ಕೈಬಿಟ್ಟಿತು.

ಆದರೆ ಅತ್ಯಂತ ಸರಾಗವಾಗಿ ರಾಷ್ಟ್ರಾಧ್ಯಕ್ಷರ ಸ್ವಾಗತಕ್ಕೆ 3 ಲಕ್ಷ ರೂಪಾಯಿಗಳು ನಿರುಪಯೋಗದಿಂದ ಒಂದೇ ಒಂದು ಆಸ್ಪತ್ರೆಗೆ ವ್ಯಯಿಸಲ್ಪಟ್ಟವು !

ಪತ್ರಿಕಾ ಸ್ವಾತಂತ್ರ್ಯ

"ಪತ್ರಿಕಾ ಸ್ವಾತಂತ್ರ್ಯ" ಎಂಬ ಮಾತು ಮಾಲೀಕರುಗಳ ಬಾಯಲ್ಲಿ ಕೂಡಬೇಕಾದಷ್ಟು ನುಡಿಯಲ್ಪಟ್ಟಿದೆ. ಆದರೆ ಮಾಲೀಕರ ಲಾಭಕ್ಕೇನಾದರೂ ಸಂಚಕಾರ ಬರುವಂತಿದ್ದರೆ, ಅಂಥ ಘಟನೆಯೇನಾದರೂ ಆ ಪತ್ರಿಕಾ ಕಛೇರಿಯಲ್ಲೇ ನಡೆದುದಾದರೆ ಪತ್ರಿಕಾ ಸ್ವಾತಂತ್ರ್ಯವನ್ನು ಬಿಡಿ, ಸುದ್ದಿ ಸ್ವಾತಂತ್ರ್ಯ ಕೂಡ ಮರ್ದನಕ್ಕೊಳಗಾಳಗುತ್ತದೆ.

ಶ್ರೀ ಎಂ. ಎಸ್. ಕಾಮಾ, ಬಾಂಬೆ ಕ್ರಾನಿಕಲ್ ಗುಂಪು ಪತ್ರಿಕೆಗಳ ಅಧಿಪತಿಗಳು. ಅಲ್ಲಿಯದೊಂದು ವರ್ತಮಾನ:

ಎಪ್ರಿಲ್ 25ರ "ಕ್ರಾನಿಕಲ್" ಪತ್ರಿಕೆಯಲ್ಲಿ ಒಂದು ಸುದ್ದಿ ಬಂತು.

"ಪ್ರಸಿದ್ಧ ಪತ್ರಿಕೋದ್ಯಮಿ ಮೃತರಾದರು".

ಈ ಶೀರ್ಷಿಕೆಯಡಿಯಲ್ಲಿ ಬಂದ ಸುದ್ದಿಯಲ್ಲಿ ಸತ್ತವರ ಚಿತ್ರವನ್ನು ಕೊಡಲಾಗಿತ್ತು. ಆ ಮೇಲೆ ವರದಿ ಹೀಗಿತ್ತು :

"ಬಾಂಬೆ ಸಮಾಚಾರ್" ಪತ್ರಿಕೆಯ ಸಹಸಂಪಾದಕರಾಗಿದ್ದ ಶ್ರೀ ಚಬಿಲ್ದಾಸ್ ವಿಠಲ್‌ದಾಸ್ ಅಂಕ್ಲೇಸರಿಯಾ ಅವರು ಈ ದಿನ ಸಂಜೆ 5 ಗಂಟೆಗೆ ಹೃದಯ ಸ್ತಂಭನದಿಂದ ತೀರಿಕೊಂಡರು.

ಅವರಿಗೆ 75 ವರುಷಗಳಾಗಿದ್ದವು. ತಮ್ಮ ಹಿಂದೆ ಹೆಂಡತಿಯನ್ನು ಬಿಟ್ಟಿದ್ದಾರೆ.

ಶ್ರೀ ಚಬಿಲ್ದಾಸ್ ಅಂಕ್ಲೆಸರಿಯಾ ಅವರು ಪ್ರಮುಖ ಗುಜರಾತಿ ಪತ್ರಿಕೋದ್ಯಮಿಯಾಗಿದ್ದರು. 43 ವರುಷಗಳ ವರೆಗೆ ಪತ್ರಿಕಾರಂಗದಲ್ಲಿದ್ದ ಇವರು ಅತ್ಯಂತ ಜನಪ್ರಿಯರೂ ಸಂಪಾದಕೀಯ ಬರೆಯುವವರು, ನಿಷ್ಪಕ್ಷಪಾತ ಹಾಗೂ ಚತುರ ಮತ್ತು ಸಮರ್ಥ ಪತ್ರಿಕೋದ್ಯಮಿಗಳೂ 'ನ್ಯೂಸ್ ಕಾಮೆಂಟೇಟರ್'ರೂ ಆಗಿದ್ದರು.

1923ರಲ್ಲಿ ಸಾಮಾನ್ಯ ವರದಿಗಾರರಾಗಿ ಕೆಲಸ ಆರಂಭಿಸಿದ ಇವರು ತಮ್ಮ

(ಕೊನೇ ಪುಟ ನೋಡಿ)

ಅಗೋಸ್ತು ಮೊದಲನೇ ವಾರದಲ್ಲಿ

ಮಜೂರ ಮಂತ್ರಿಗಳಿಗೆ ಮನವಿ ಒಪ್ಪಿಸಲು

ಜಿಲ್ಲಾ ಬೀಡಿ ಮಜೂರ ಪ್ರತಿನಿಧಿಗಳ ಸಭೆಯ ನಿರ್ಣಯ

ದ. ಕ. ಜಿಲ್ಲಾ ಬೀಡಿ ಮಜೂರರ ಪ್ರತಿನಿಧಿಗಳ ಸಭೆಯೊಂದು ತಾ. 17-6-58 ರಂದು ಶ್ರೀ ಎ. ಶಾಂತಾರಾಮ ಪೈಯವರ ಅಧ್ಯಕ್ಷತೆಯಲ್ಲಿ ಜರುಗಿತು. ಯಸ್. ಕೆ.ಟಿ.ಯು.ಸಿ.ಯ ಕಾರ್ಯದರ್ಶಿ ಶ್ರೀ ಕೆ. ಮೋನಪ್ಪ ಶೆಟ್ಟಿಯವರು ಬಂಟವಾಳದಲ್ಲಿ ಜರಗಿದ ಪ್ರಾಂತ ಬೀಡಿ ಮಜೂರರ ಸಮ್ಮೇಳನದ ನಂತರದ ಜಿಲ್ಲೆಯ ಬೀಡಿ ಮಜೂರರ ಚಟುವಟಿಕೆಗಳ ವರದಿಯೊಂದನ್ನು ಸಭೆಯ ಮುಂದಿಟ್ಟರು. ಶ್ರೀಯುತರುಗಳಾದ ಬಿ. ಎಚ್. ಬಂಗೇರ, ಬಿ. ವೀರಪ್ಪ ಸಾಲ್ಯಾನ್, ಯು. ಜನಾರ್ಧನ ನಾಯಕ್, ಪಿ. ಶೀನ ನಾಯಕ್, ಯು. ಕೃಷ್ಣ ಮತ್ತು ಎಂ. ಕೃಷ್ಣ ಪಿಳ್ಳೆ ಮೊದಲಾದವರು ಬೀಡಿ ಮಜೂರರ ಸಮಸ್ಯೆಗಳಿಗೆ ಸಂಬಂಧಿಸಿ ಸಲಹೆ ಸೂಚನೆಗಳನ್ನಿತ್ತು ಮಾತಾಡಿದರು.

ನಂತರ ದ. ಕ. ಜಿಲ್ಲೆಯಲ್ಲಿ ಬೀಡಿ ಮಜೂರರಿಗೆ ಕನಿಷ್ಠ ಕೂಲಿ ನಿರ್ಣಯ ಬೇಕು ಮತ್ತು ಬೀಡಿ ಮಜೂರರ ಹಿತರಕ್ಷಣಾ ಕಾನೂನು ಕೂಡಲೇ ಜ್ಯಾರಿಯಾಗಬೇಕು ಎಂಬ ಕೇಳಿಕೆಗಳನ್ನು ಮಾನ್ಯ ಮಾಡುವಂತೆ ಸರಕಾರವನ್ನು ಒತ್ತಾಯಿಸುವ ಮನವಿಗೆ ಇಡೀ ಜಿಲ್ಲೆಯಲ್ಲಿರುವ ಸಹಸ್ರಾರು ಬೀಡಿ ಮಜೂರರ ಸಹಿಸಂಗ್ರಹಿಸಬೇಕೆಂದು ತೀರ್ಮಾನವಾಯಿತು.

ಅಗೋಸ್ತು ಮೊದಲನೇ ವಾರದಲ್ಲಿ ಜಿಲ್ಲೆಯ ಬೀಡಿ ಮಜೂರ ಪ್ರತಿನಿಧಿಗಳ ಶಿಷ್ಟಮಂಡಲವೊಂದು ಬೆಂಗಳೂರಿಗೆ ತೆರಳಿ ಮಜೂರ ಮಂತ್ರಿಗಳನ್ನು ಕಂಡು ಮಜೂರರು ಸಹಿಹಾಕಿರುವ ಮನವಿಯನ್ನು ಒಪ್ಪಿಸಬೇಕೆಂದು ನಿರ್ಣಯವಾಯಿತು.

ಉಡುಪಿ ತಾಲೂಕು, ಮಂಗಳೂರು ನಗರ, ಮಂಗಳೂರು ಸರ್ಕಲ್, ಕೋಟೆಕಾರ್ ಸರ್ಕಲ್, ಬಂಟವಾಳ ಸರ್ಕಲ್, ಪಾಣೆಮಂಗಳೂರು ಸರ್ಕಲ್ ಮತ್ತು ಗುರುಪುರ ಸರ್ಕಲ್‌ಗಳ ಬೀಡಿ ಮಜೂರರ ಚುನಾಯಿತ ಪ್ರತಿನಿಧಿಗಳ ಸಭೆ ಕರೆದು, ಬಂಟವಾಳ ಸಮ್ಮೇಳನದಲ್ಲಿ ಅಂಗೀಕರಿಸಿರುವ ಬೀಡಿ ಮಜೂರರ ಈಗಿನ ಮಜೂರಿಯಲ್ಲಿ ನಾಲ್ಕಾಣೆ ಹೆಚ್ಚು ಸಿಗಬೇಕೆಂಬ ಕೇಳಿಕೆಯನ್ನು ಜ್ಯಾರಿಗೊಳಿಸುವ ಬಗೆಯನ್ನು ಆಯಾ ಸರ್ಕಲಿನ ಪರಿಸ್ಥಿತಿಯ ಆಧಾರದಲ್ಲಿ ಆಲೋಚಿಸಿ ಕಾರ್ಯಕ್ರಮ ಕೈಕೊಳ್ಳಬೇಕೆಂದು ನಿರ್ಧರಿಸಲಾಯಿತು.

ಜಿಲ್ಲೆಯ ಬೀಡಿ ಮಜೂರರನ್ನು ಸಂಘದ ಸದಸ್ಯರನ್ನಾಗಿ ಸೇರಿಸುವ ಕಾರ್ಯಕ್ಕೆ ಎಲ್ಲಾ ಯೂನಿಯನ್‌ಗಳು ಹೆಚ್ಚಿನ ಮಹತ್ವ ಕೊಟ್ಟು ಈಗಿರುವ ಸದಸ್ಯರ ಸಂಖ್ಯೆಯನ್ನು ಮೂರು ಪಾಲಷ್ಟು ಹೆಚ್ಚಿಸಬೇಕೆಂಬ ನಿರ್ಣಯ ಮಾಡಲಾಯಿತು.

ಅಲ್ಲದೆ ಮಂಗಳೂರು ಗಣೇಶ ಬೀಡಿ ವರ್ಕ್ಸ್‌ನ ಮಾಲಕರು 1955—56ನೇ ವರ್ಷದ ಬಗ್ಗೆ ಮಂಗಳೂರಿನಲ್ಲಿ ಹೆಂಪನ್ ಕಟ್ಟೆ ಮತ್ತು ಕುದ್ರೋಳಿಯಲ್ಲಿರುವ ತಮ್ಮ ಫ್ಯಾಕ್ಟರಿಗಳ ಮಜೂರರಿಗೆ ಕೊಟ್ಟಿರುವ ಅರ್ಧ ತಿಂಗಳ ಅಧಿಕ ಬೋನಸ್ಸನ್ನು ಅದೇ ಮಾಲಕರಿಗೆ ಈ ಜಿಲ್ಲೆಯ ಇತರ ಕಡೆಗಳಲ್ಲಿರುವ ಫ್ಯಾಕ್ಟರಿಯ ಮಜೂರರಿಗೂ ಕೊಡಬೇಕೆಂದು ಒತ್ತಾಯಪಡಿಸುವ, ಪಣಂಬೂರಿನ ಖಾದರ್ ಬೀಡಿ ಬ್ರ್ಯಾಂಚನ್ನು ಮುಚ್ಚಿದುದಕ್ಕಿದಿರಾಗಿ ಬೆಂಗಳೂರಿನ ಇಂಡಸ್ಟ್ರಿಯಲ್ ಟ್ರಿಬ್ಯೂನಲ್ ಕೊಟ್ಟಿರುವ ಎವಾರ್ಡನ್ನು ಉಲ್ಲಂಘಿಸಿರುವ ಮಾಲಕರನ್ನು ಶಿಕ್ಷೆಗೆ ಗುರಿಪಡಿಸಬೇಕೆಂದು ಸರ್ಕಾರವನ್ನು ಒತ್ತಾಯಪಡಿಸುವ, ಜೂನ್ ತಿಂಗಳ ಕೊನೆಯಲ್ಲಿ ಮಂಗಳೂರು ಗಣೇಶ ಬೀಡಿ ಫ್ಯಾಕ್ಟರಿಯ ಮಾಲಕರು ಮಜೂರರಿಗೆ ಕೊಡುವ ರಜೆಗೆ ವೇತನ ಕೊಡಬೇಕೆಂದು ಮಾಲಕರನ್ನು ಒತ್ತಾಯಪಡಿಸುವ, ಮನೆಗಳಲ್ಲಿ ಪಾಸು ಬುಕ್ಕಿನಲ್ಲಿ ಬೀಡಿ ಕಟ್ಟುವ ಮಜೂರರಿಂದ ಲೈಸೆನ್ಸ್ ಫೀಸ್ ವಸೂಲು ಮಾಡಬಾರದೆಂದು ಜಿಲ್ಲೆಯ ಎಲ್ಲಾ ಮುನಿಸಿಪಾಲಿಟಿ ಮತ್ತು ಪಂಚಾಯತ್ ಬೋರ್ಡುಗಳನ್ನು ಒತ್ತಾಯಿಸುವ, ಮುಷ್ಕರ ಹೂಡಿರುವ ಮದರಾಸಿನ ಬಂದರ್ ಮಜೂರರ ಮೇಲೆ ಪೋಲೀಸರು ನಡೆಸಿರುವ ಗೋಳೀಬಾರನ್ನು ಖಂಡಿಸುವ ಮತ್ತು ಈ ಗೋಳೀಬಾರಿನ ಕುರಿತು ಯೋಗ್ಯ ವಿಚಾರಣೆ ನಡೆಸಬೇಕೆಂದು ಸರ್ಕಾರವನ್ನು ಒತ್ತಾಯಿಸುವ ಹಾಗೂ ಬಂದರ ಮಜೂರರ ಮುಷ್ಕರಕ್ಕೆ ಬೆಂಬಲ ನೀಡುವ ಠರಾವುಗಳನ್ನು ಸಭೆಯಲ್ಲಿ ಅಂಗೀಕರಿಸಲಾಗಿದೆ.

ಸಭೆಯ ಕಾರ್ಯಕಲಾಪಗಳ ಪ್ರಾರಂಭದಲ್ಲಿ ಅಖಿಲ ಭಾರತದ ಮಜೂರ ಮುಂದಾಳುಗಳಲ್ಲಿ ಅತೀ ಹಿರಿಯರೂ ಅ. ಭಾ. ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರೂ ಆಗಿದ್ದ ಶ್ರೀ ಚಕ್ಕರೈ ಚೆಟ್ಟಿಯಾರರ ನಿಧನಕ್ಕೆ ಸಂತಾಪ ಸೂಚಿಸಲಾಯಿತು.

ನೇಗಿಲ ಸಾಲ ಮೇಲೆ

(೩ನೇ ಪುಟದಿಂದ)

ಯನ್ನು ಮೇಲೆತ್ತಿತು, ಮತ್ತೆ ನಿರಾಶೆಯಿಂದ ಕೆಳಗ ಚೆಲ್ಲಿತು. ಆದರೆ ಮತ್ತೆ ಮೇಲೇಳಲು ಸಾಧ್ಯವಾಗಲೇ ಇಲ್ಲ.

ಬೋನ್ ಕಂಬಳಿಯನ್ನು ಬಿಸಾಕಿದ. ನೇರವಾಗಿ ನಿಂತು ಅದರ ಬಳಿ ಬಂದು ಆಳತೊಡಗಿದ.

ಸಿವುಕ್ಷಾ ಕೊನೆಯದಾಗಿ ಒಮ್ಮೆ ಕಣ್ಣು ತೆರೆಯಿತು ಮತ್ತು ಉಸಿರಾಡಿಸುವುದನ್ನು ನಿಲ್ಲಿಸಿತು.

ಸಂಪಾದಕರಿಗೆ ಪತ್ರಗಳು

ಅಮೃತಮಹಲ್ ಕಾವಲು ಭೂಮಿ

ಮೈಸೂರು ಸರಕಾರದವರು ಅಮೃತ ಮಹಲ್ ಕಾವಲನ್ನು ರೆವಿನ್ಯೂ ಇಲಾಖೆಗೆ ಸೇರಿಸಿಕೊಂಡು ಹಂಚಿಕೊಡುವುದಾಗಿ ಯೋಜಣಿ ಸಹ ನಡೆದಿರುತ್ತೆ. ಹಾಸನ ಜಿಲ್ಲೆಯ ಜಾವಗಲ್ ಹೋಬಳಿ ಬೂಚೇನಹಳ್ಳಿ ಅಮೃತ ಮಹಲ್ ಕಾವಲು ಈವರೆಗೂ ಯೋಜಣೆಯಾಗದಿರಲು ಕಾರಣವೇನು? ಬೂಚೇನಹಳ್ಳಿಯಂತೂ ನಾಶವಾಗಿ ಹೋಗಿದೆ. ಇಲ್ಲಿ ನೂತನ ಗ್ರಾಮವನ್ನು ನಿರ್ಮಾಣ ಮಾಡಲು ಜಮೀನಿಲ್ಲದ ಬಡವರು ಅನೇಕ ಸಲ ಅರ್ಜಿ ಗುಜರಾಯಿಸಿರುತ್ತಾರೆ. ಜಮೀನಿಲ್ಲದ ಬಡವರಿಗೆ ಈ ಜಮೀನು ಸಾಗುವಳಿ ಕೊಟ್ಟು ನಿರುದ್ಯೋಗ ನಿವಾರಣೆ ಮಾಡಿ ವ್ಯವಸಾಯಾಭಿವೃದ್ಧಿಗೆ ಅವಕಾಶ ಮಾಡಿಕೊಡುವುದು ಜವಾಬ್ದಾರಿ ಸರ್ಕಾರದ ಕರ್ತವ್ಯವಾಗಿರುತ್ತದೆ.

ಪ್ರಥಮತಃ ತಾಲ್ಲೋಕು ಕಛೇರಿ ಮತ್ತು ರೆವಿನ್ಯೂ ಇನ್ಸ್‌ಪೆಕ್ಟರುಗಳು ದರಖಾಸ್ತುಗಳನ್ನು ಪೆಂಡಿಂಗ್ ಇಡದಂತೆ ಏರ್ಪಾಡು ಮಾಡಬೇಕಾಗಿದೆ. ಸರಕಾರವು ಇದನ್ನು ಗಮನಿಸೀತೆ?

ಕೆ. ಎಲ್. ಹುಚ್ಚಪ್ಪ,
ಹಳೇಬೀಡು.

ಫುಟ್‌ಪಾತ್ ಮೇಲೆ ಮಾರಾಟ

ಬೆಂಗಳೂರಿನಲ್ಲಿ ಫುಟ್‌ಪಾತ್ ಮೇಲೆ ಅನೇಕ ಜನರು ತಮ್ಮ ವಸ್ತುಗಳನ್ನು ಮಾರಾಟ ಮಾಡುವ ದೃಶ್ಯವೇನು ಅಪರೂಪವಲ್ಲ. ಇದು ಕಾನೂನಿಗೆ ವಿರೋಧವಾದುದಾದರೂ ಇದೇನು ಕಡಮೆಯಾಗಿಲ್ಲ. ಪೋಲೀಸಿನವರು ಆಗಾಗ ಇವರನ್ನು ಓಡಿಸುತ್ತಿರುತ್ತಾರೆ. ಆದರೆ ಅವರು ಓಡಿಸುವುದು, ಬಿಡುವುದು ಸ್ವಾರಸ್ಯಕರವಾದ ಸಮಾಚಾರವಾಗಿದೆ. ಅವೆಲ್ಲ "ಮಾಮೂಲು" ಸಮಾಚಾರ! ನಗರದಲ್ಲಿ ಸೋವಿಯತ್ ಮತ್ತು ಕಮ್ಯೂನಿಸ್ಟ್ ಸಾಹಿತ್ಯ ಮಾರುವವ ನಾನೊಬ್ಬ. ಪತ್ರಿಕೆಗಳನ್ನು ಹೊತ್ತು ಮಾರುವ ವೃತ್ತಿಯ ನಾನು ಒಂದು ದಿನ ಶ್ರೀ ಕೃಷ್ಣರಾಜ ಮಾರ್ಕೆಟ್ ರೋಡಿನಲ್ಲಿ ಮಾರುತ್ತಿದ್ದಾಗ ಪೋಲೀಸನೊಬ್ಬ ಬಂದು 'ಸ್ಪೆಷಲ್ ಟ್ಯಾಕ್ಸ್' ನಾಲ್ಕಾಣೆ ಕೊಡಿ ಎಂದ. ಎಂಥ ಟ್ಯಾಕ್ಸ್, ಏನು ಯಾಕೆ ಎಂದು ನಾನು ಕೇಳಿದಾಗ 'ಹೆಚ್ಚು ಮಾತನಾಡಬೇಡಿ. ಕೊಟ್ಟುಹೋಗಿ' ಎಂದು ಗದರಿಸಿದಾಗ ನಾನು ಅವರ ವರ್ತನೆಗೆ ಬೆಚ್ಚಿಹೋದೆ. "ತಡೆ ನಿನ್ನ ಸಮಾಚಾರ ಸರಿಯಾಗಿ ವಿಚಾರಿಸುತ್ತೇನೆ" ಎಂದು ಹೇಳಿ ಹೊರಟುಹೋದ. ಹೋದ ಮೇಲೆ ಸಾದಾ ಉಡುಪಿನಲ್ಲಿದ್ದ ಇಬ್ಬರು ವ್ಯಕ್ತಿಗಳೊಡನೆ ಆ ಪೋಲೀಸಿನವನು ಬಂದು ನನ್ನ ಬಳಿಯಲ್ಲಿದ್ದ ಐದಾರು ರೂಪಾಯಿ ಬೆಲೆಬಾಳುವ ಪತ್ರಿಕೆಗಳನ್ನೂ ಜೇಬಿನಲ್ಲಿದ್ದ ನಗದು ಹಣವನ್ನೂ ಬಲಾತ್ಕಾರದಿಂದ ಕಿತ್ತುಕೊಂಡುಹೋದ.

ಇದರ ಬಗ್ಗೆ ಅದೆಷ್ಟೋ ವಿಚಾರಗಳನ್ನು ನಡೆಸಿದರೂ ಸಂಬಂಧಿಸಿದ ಅಧಿಕಾರಿಗಳು ಏನೇನೋ ಮಾತನಾಡುತ್ತಾರೆ.

ಫುಟ್‌ಪಾತ್ ಮೇಲೆ ಇಟ್ಟುಕೊಂಡು ಮಾರಾಟ ಮಾಡುವವನು ನಾನೊಬ್ಬನೆ? ಹಣ್ಣು, ಇನ್ನಿತರ ಸ್ಟೇಷನರಿ ಸಾಮಾನುಗಳನ್ನು ಮಾರುವವರಿಗೇನು ಕಡಿಮೆಯಿಲ್ಲ. "ಮಾಮೂಲಿ"ಗೇನಾದರೂ ಆತಂಕವಾದರೆ ಮಾತ್ರ ಕಾನೂನು ರಕ್ಷಕರು ಗಲಾಟೆ ಮಾಡುತ್ತಾರೆ. ಕಾನೂನು ಚಲಾವಣೆ ಎಷ್ಟು ಚೆನ್ನಾಗಿ ನಡೆದಿದೆ ಎಂಬುದಕ್ಕೆ ತಿಂಗಳಿಗೆ ಒಂದೋ ಎರಡೋ ಕೇಸುಗಳನ್ನು ಹಾಕುತ್ತಾರೆ. ಇದೆಂಥ ಕಾನೂನು? ಇವರೆಂಥ ಕಾನೂನು ರಕ್ಷಕರು ? !

ನಾನು ಕಳೆದುಕೊಂಡ ಹಣಕ್ಕೂ, ಪತ್ರಿಕೆಗಳಿಗೂ ಯಾರು ಹೊಣೆಗಾರರು? ಪ್ರಾಮಾಣಿಕವಾಗಿ ದುಡಿದು ಜೀವಿಸುವವರಿಗೆ ನಮ್ಮ ರಾಜ್ಯದಲ್ಲಿ ಇಂಥದೇ ಪ್ರತಿಫಲವೇ?

ವೈ. ಎಚ್. ವೀರಣ್ಣ ಗೌಡ,
ಬೆಂಗಳೂರು.

ಯಶವಂತಪುರವು ಬೆಂಗಳೂರಿನ ಕಾರ್ಪೊರೇಷನ್ನಿಗೆ ಸೇರಲಿ

ಯಶವಂತಪುರವು ಸುಮಾರು ಹನ್ನೆರಡು ಹದಿಮೂರು ಸಹಸ್ರ ಜನವಸತಿಯಿರುವ ಉಪನಗರವಾಗಿದೆ. ಇಲ್ಲಿ ಅನೇಕ ದೊಡ್ಡ ಕೈಗಾರಿಕೆಗಳಿವೆ. ಆದರೆ ಬೆಂಗಳೂರಿಗೆ ಹತ್ತಿಕೊಂಡೇ ಇದು, ಬೆಂಗಳೂರಿನ ಬೆಳವಣಿಗೆಯಲ್ಲಿ ಒಂದು ಭಾಗವಾಗಿ ರೂಪುಗೊಂಡಿದೆ. ಆದರೂ ಇದು ಈವರೆಗೂ ಬೆಂಗಳೂರಿನ ಕಾರ್ಪೊರೇಷನ್ನಿಗೂ ಸೇರಿಸಲ್ಪಡಲಿಲ್ಲ, ಅಥವಾ ಯಾವುದೇ ವಿಧವಾದ ಪೌರ ಸಭೆಯೂ ಇಲ್ಲ. ಅಂತೆಯೇ ಪೌರ ಸೌಕರ್ಯಗಳೂ ಇಲ್ಲ. ಹೀಗಾಗಿ ಇಲ್ಲಿಯ ಪೌರರು ಪರದೇಶಿಗಳಾಗಿದ್ದಾರೆ. ಬೆಂಗಳೂರು ನಗರ ಸಭೆಯು ಇದನ್ನು ಗಮನಿಸಿದರೆ ಅದರ ಆದಾಯದ ಬಾಬ್ತು ಹೆಚ್ಚಾದೀತು. ಪೌರರಿಗೆ ಸೌಭಾಗ್ಯಗಳೂ ದೊರೆತಾವು.

ಓರ್ವ ಯಶವಂತಪುರ ನಿವಾಸಿ.

ಉಪಾಧ್ಯಾಯರ ಗೋಳು !

ದಾವಣಗೆರೆ ಉಪಾಧ್ಯಾಯರ ಹಾಗೂ ಉಪಾಧ್ಯಾಯಿನಿಯರ ಗೋಳು ಬೆಳೆಯುತ್ತಿದೆ. ಅಧಿಕಾರಿಗಳ ಉಪದ್ರವ ಜಾಸ್ತಿಯಾಗಿ ಉಪಾಧ್ಯಾಯರು ನೌಕರಿಯಲ್ಲಿ ಜೀವಿಸುವುದೇ ಕಷ್ಟವಾಗಿದೆ. ಮನಸ್ಸಿಗೆ ಬಂದಹಾಗೆ ವರ್ಗಾವರ್ಗಿಗಳನ್ನು ನಡೆಸುತ್ತಾರೆ, ಮಾಮೂಲು ಕೊಟ್ಟವರಿಗೆ ಅವರು ಇಷ್ಟಪಟ್ಟಸ್ಥಳಕ್ಕೆ ವರ್ಗಾಯಿಸುತ್ತಾರೆ. ಕೊಡದಿದ್ದವರಿಗೆ ತೊಂದರೆಗಳನ್ನು ಕೊಡುತ್ತಾರೆ. ಸ್ಕೂಲುಗಳಿಗೆ ಮನೆಗಳನ್ನು ಬಾಡಿಗೆ ಕೊಟ್ಟ ಮಾಲೀಕರುಗಳು ಮೇಲಾಧಿಕಾರಿಗಳಿಗಿಂತಲೂ ಹೆಚ್ಚಾಗಿ ಉಪಾಧ್ಯಾಯರ ಮೇಲೆ ಅಧಿಕಾರ ನಡೆಸುತ್ತಾರೆ.

ಹೀಗಾಗಿ ಉಪಾಧ್ಯಾಯ ವೃತ್ತಿಯೇ ಇಲ್ಲಿಯವರಿಗೆ ಸಾಕಾಗಿ ಹೋಗಿದೆ. ಸರಕಾರವು ಒಂದಿಷ್ಟು ತನ್ನ ಕೃಪಾಕಟಾಕ್ಷವನ್ನು ಈ ಕಡೆಗೆ ಹೊರಳಿಸಿತೆ?

ಹೆಚ್. ರಾಮಚಂದ್ರ ಶಾಸ್ತ್ರಿ
ದಾವಣಗೆರೆ

ಶ್ರಮಿಕ ವರ್ಗದ ಮುನ್ನಡೆ

★

ಶಿವಮೊಗ್ಗಾ—

ತಾ. 15—6—58ರಂದು ಭಾನುವಾರ ಜಿಲ್ಲಾ ಕಮ್ಯೂನಿಸ್ಟ್ ಪಾರ್ಟಿ ಕಾರ್ಯಕರ್ತರ ಸಭೆಯು ಸೇರಿದ್ದಿತು. ಜಿಲ್ಲಾದ್ಯಂತ ವಿವಿಧ ಶಾಖೆಗಳಿಂದ 30 ಚುನಾಯಿತ ಪ್ರತಿನಿಧಿಗಳು ಭಾಗವಹಿಸಿದ್ದರು. ಶ್ರೀ ಬಿ. ಎನ್. ಎ ಹೆಗ್ಡೆಯವರು ಸಭಾಧ್ಯಕ್ಷತೆ ವಹಿಸಿದ್ದರು.

ವಿವಿಧ ಶಾಖೆಗಳ ಕಾರ್ಯದರ್ಶಿಗಳು ಸೂಕ್ಷ್ಮ ವರದಿಯನ್ನು ಸಭೆಯ ಮುಂದಿಟ್ಟರು. ವರದಿಗಳ ಚರ್ಚೆಯಾದ ನಂತರ ತಾತ್ಕಾಲಿಕ ಜಿಲ್ಲಾ ಸಮಿತಿಯನ್ನು ರಚಿಸಲಾಯಿತು.

ತಮಿಳುನಾಡಿನ ಪ್ರಸಿದ್ಧ ಕಾರ್ಮಿಕ ಮುಖಂಡರಾದ ಶ್ರೀ ಚಕ್ಕರೈ ಚೆಟ್ಟಿಯಾರ್‌ರವರ ಅಕಾಲ ಮರಣಕ್ಕೆ ವಿಷಾದ ವ್ಯಕ್ತಪಡಿಸಿ 2 ನಿಮಿಷ ಮೌನ ಆಚರಿಸಲಾಯಿತು.

ಜಿಲ್ಲಾ ಸಮ್ಮೇಳನವನ್ನು ನವಂಬರ್ ತಿಂಗಳ ಕೊನೆಯ ವಾರದಲ್ಲಿ ನಡೆಸಬೇಕೆಂದೂ, ಸಮ್ಮೇಳನಕ್ಕೆ ಕೇರಳದ ಕಮ್ಯೂನಿಸ್ಟ್ ಸರ್ಕಾರದ ಮುಖ್ಯ ಮಂತ್ರಿ ಶ್ರೀ ಇ. ಎಂ. ಎಸ್. ನಂಬೂದ್ರಿಪಾದ್ ಮತ್ತು ಕೇಂದ್ರ ಸಮಿತಿ ಸದಸ್ಯರಾದ ಪಿ. ರಾಮಮೂರ್ತಿಯವರನ್ನೂ ಆಹ್ವಾನಿಸಬೇಕೆಂದು ತೀರ್ಮಾನಿಸಲಾಯಿತು.

ಸಮಗ್ರ ಭೂಸುಧಾರಣೆ ಜಾಗ್ರತೆ ಆಗದೆ ಬಹಳ ವಿಳಂಬವಾಗುತ್ತಾ ಇದೆ. ಆದಷ್ಟು ಜಾಗ್ರತೆ ಸಮಗ್ರ ಭೂಸುಧಾರಣೆಯನ್ನು ಮಾಡಬೇಕೆಂದು, ಸರ್ಕಾರವನ್ನು ಒತ್ತಾಯಪಡಿಸುವ, ಕಾರ್ಮಿಕರ ಬಗ್ಗೆ ಸರ್ಕಾರ ಅನುಸರಿಸುತ್ತಿರುವ, ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸುವ, ಷಾಪ್ ಅಂಡ್ ಎಷ್ಟಾಬ್ಲಿಷ್‌ಮೆಂಟ್ ಆಕ್ಟ್ ಜಾರಿಯಲ್ಲಿದ್ದರೂ ಅದು ಕಾರ್ಯಗತವಾಗಿ ಕಾರ್ಮಿಕರಿಗೆ ಅದರ ಸೌಲಭ್ಯ ದೊರೆಯದೆ ಇರುವುದಕ್ಕೆ ವಿಷಾದಿಸುವ, ಎಂ. ಆರ್. ಪಿ. ಲೈಸೆನ್ಸ್ ರದ್ದು ಮಾಡಿರುವುದರಿಂದ ಬಡವರಿಗೆ ಬಹಳ ತೊಂದರೆಯಾಗುತ್ತದೆ, ಪುನಃ ಅದನ್ನು ಜಾರಿ ಮಾಡಿ, ಬಡವರಿಗೆ ಅನುಕೂಲ ಒದಗಿಸಬೇಕೆಂದು ಒತ್ತಾಯ ಮಾಡುವ, ಡಾಕ್ ಕೆಲಸಗಾರರ ಹೋರಾಟಕ್ಕೆ ಸಹಾನುಭೂತಿಯನ್ನು ವ್ಯಕ್ತಪಡಿಸಿ, ಬೆಂಬಲ ನೀಡುವ, ಕಮ್ಯೂನಿಸ್ಟ್ ಪಾರ್ಟಿ ಕಾರ್ಯಕರ್ತರ ಮನೆಗಳಿಗೆ ಹೋಗಿ ಅವರ ವಿವರಗಳನ್ನು ಕೇಳುವುದು, ಪ್ರಜಾಪ್ರಭುತ್ವಯುಗದಲ್ಲಿ ಖಂಡನೀಯವಾದದು. ಈ ರೀತಿಯ ಪೋಲೀಸರ ವರ್ತನೆಯನ್ನು ಖಂಡಿಸುವ ನಿರ್ಣಯಗಳನ್ನು ಅನುಮೋದಿಸಲಾಯಿತು.

ಕೋಲಾರ—

ಜೂನ್ ೧೫ರಂದು ಭಾರತ ಕಮ್ಯೂನಿಸ್ಟ್ ಪಕ್ಷದ ಕೋಲಾರ ಜಿಲ್ಲಾ ಸಮಿತಿಯ ಸಭೆಸೇರಿ, ಎ. ಐ. ಟಿ. ಯು. ಸಿ. ಯ ಮಾಜೀ ಅಧ್ಯಕ್ಷರೂ ಕಾರ್ಮಿಕ ನಾಯಕರೂ ಆಗಿದ್ದ ಶ್ರೀ ವಿ. ಚಕ್ಕರೈ ಚೆಟ್ಟಿಯಾರ್‌ರವರ ನಿಧನದ ಬಗ್ಗೆ ತನ್ನ ಸಂತಾಪವನ್ನು ವ್ಯಕ್ತಪಡಿಸಿತು.

ಇತ್ತೀಚೆಗೆ ಅಮೃತಸರದಲ್ಲಿ ಸೇರಿದ್ದ ಅಖಿಲ ಭಾರತ ಕಮ್ಯೂನಿಸ್ಟ್ ಪಕ್ಷದ

(೯ನೇ ಪುಟ ನೋಡಿ)

ಸಂಘಟಿತರಾಗುತ್ತಿರುವ ರೈತ ಕಾರ್ಮಿಕರು

ಮೈಸೂರು—

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ಟಿ. ನರಸೀಪುರ ಮತ್ತು ಕೊಳ್ಳೆಗಾಲಗಳಲ್ಲಿ ರೈತ ಸಂಘಕ್ಕೆ ಸದಸ್ಯರನ್ನು ಸೇರಿಸುವ ಕೆಲಸವು ಭರದಿಂದ ಸಾಗುತ್ತಿದೆ ಟಿ. ನರಸೀಪುರದ ತಾಲ್ಲೂಕಿನಲ್ಲಿ ಕಳೆದ ಸುಗ್ಗಿಯಲ್ಲಿ ಸಂಘದ ಚಟುವಟಿಕೆಯಿಂದಾಗಿ ಟೆನೆನ್ಸಿ ಕಾನೂನಿನ ಕಾಯಿದೆಗಳನ್ನು ರೈತರಲ್ಲಿ ಪ್ರಚಾರ ಮಾಡಿದುದರಿಂದಾಗಿ ರೈತರು ಜಮೀನ್ದಾರರಿಗೆ ಸಲ್ಲಿಸುತ್ತಿದ್ದ ಹೆಚ್ಚಿಗೆ ಗುತ್ತಿಗೆಯಲ್ಲಿ ಬಹಳ ಕಡಿತವಾಗಿದೆ. ಇದರಿಂದ ರೈತರು ಬಹಳ ಪ್ರಯೋಜನ ಹೊಂದಿದ್ದಾರೆ.

ಮಂಡ್ಯ ಜಿಲ್ಲೆಯ ಕ್ಯಾತನಹಳ್ಳಿ ನಗುವನಹಳ್ಳಿ ಮಹದೇವಪುರಗಳಲ್ಲಿ ರೈತರ ಹೋರಾಟ ಮುಂದೆ ಸಾಗುತ್ತಿದೆ ಈ ಗ್ರಾಮಗಳಲ್ಲಿ ರೈತರನ್ನು ಜಮೀನಿನಿಂದ ಓಡಿಸುವ ಪ್ರಯತ್ನ ನಡೆಯುತ್ತಿದೆ. ಈಗಾಗಲೆ ಹಲವು ರೈತರ ಮೇಲೆ ಟೆನೆನ್ಸಿ ಮೊಕದ್ದಮೆ ಮತ್ತು ಕ್ರಿಮಿನಲ್ ಮೊಕದ್ದಮೆಗಳು ಕೂಡ ನಡೆಯುತ್ತಿವೆ. ಈ ಮೊಕದ್ದಮೆಗಳ ಸಲುವಾಗಿ ಸಾರ್ವಜನಿಕರಿಂದ ಹಣ ವಸೂಲು ಮಾಡಿ ಕೇಸುಗಳನ್ನು ನಡೆಸುವ ಪ್ರಯತ್ನ ನಡೆಯುತ್ತಿದೆ. ಮಹದೇವಪುರದ ಗ್ರಾಮದಲ್ಲಿ ಬಂಜರು ಭೂಮಿ ಹೆಚ್ಚಾಗಿದ್ದು ಜಮೀನಿಲ್ಲದ ರೈತರಲ್ಲಿ ಕೆಲವರು ಬಂಜರು ಭೂಮಿಯನ್ನು ಹಂಚಿಕೊಂಡು ಬೇಸಾಯ ಮಾಡಲು ಪ್ರಾರಂಭಿಸಿದ್ದಾರೆ.

ಬನುವತಿ—

ತಾ. 14—6—1958ನೇ ಶನಿವಾರ ದೊಡ್ಡಬಳ್ಳಾಪುರ ತಾಲ್ಲೂಕು ಬನುವತಿಯಲ್ಲಿ ಸುತ್ತಲ ಗ್ರಾಮಗಳ ರೈತರ ಬಹಿರಂಗ ಸಭೆ ಏರ್ಪಡಿಸಲಾಗಿತ್ತು. ಮಳೆಯ ಪ್ರಯುಕ್ತ ದೇವಸ್ಥಾನದಲ್ಲಿ ಸಭೆ ನಡೆಯಿತು. ರೈತರನ್ನುದ್ದೇಶಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಬಿ. ವಿ. ಕಕ್ಕಿಲ್ಲಾಯರು ಮತ್ತು ತಾಲ್ಲೂಕು ರೈತ ಸಂಘದ ಅಧ್ಯಕ್ಷರಾದ ಟಿ. ಮುಗುವಾಳಪ್ಪನವರು ಮಾತನಾಡಿದರು. ಕಾ॥ ಬಿ. ವಿ. ಕಕ್ಕಿಲ್ಲಾಯರು ರೈತರ ದುಸ್ಥಿತಿ ಭೂಸುಧಾರಣೆ ಜೋಡಿಗ್ರಾಮಗಳ ಪರಿಸ್ಥಿತಿ, ಸರ್ವೆಸೆಟ್ಲ್‌ಮೆಂಟ್‌ನಲ್ಲಿ ಆಗುವ ತೊಂದರೆಗಳು ಅಲ್ಲದೆ ಆ ಕಾಲದಲ್ಲಿ ಲಂಚ ತಿನ್ನುವ ವಿಚಾರ, ದಕ್ಷಿಣ ಕನ್ನಡ ಜಿಲ್ಲೆಯ ರೈತಕಾರ್ಮಿಕ ಚಳುವಳಿಗಳನ್ನು ಕುರಿತು ಮಾತನಾಡಿದರು. ಸಭೆಯಲ್ಲಿ ಕಾಮ್ರೇಡರುಗಳಾದ ಎಸ್. ಮಧುಸೂದನ್, ಎಂ. ಗಂಗಾಧರ್, ಸಿ. ರಾಮಭದ್ರಯ್ಯ, ಬೈರಹನುಮೇಗೌಡ, ಡಾ॥ ಸಾಂಬಾಜಿ ಇವರು ಸಂಘಟನೆಗಳ ಬಗ್ಗೆ ಮಾತನಾಡಿದರು.

...ಸಮಾಜವಾದೀ ಪ್ರಯೋಗದಲ್ಲಿ ಕೇರಳ...

ಕೇರಳ ಸರ್ಕಾರವು ತನ್ನ ರಾಜ್ಯದಲ್ಲಿ 1958—59ರ ಅವಧಿಗಾಗಿ ಹಿಂದುಳಿದ ವರ್ಗದ ಬುಡಕಟ್ಟಿನ ಮತ್ತು ಕುಟುಂಬಿಗಳ ಹಾಗೂ ಹಿಂದುಳಿದ ವರ್ಗದಿಂದ ಮತಾಂತರಿಸಲ್ಪಟ್ಟ ಕ್ರಿಶ್ಚಿಯನ್ ವಿದ್ಯಾರ್ಥಿಗಳಿಗಾಗಿ ಸಂಪೂರ್ಣ ಉಚಿತ ಶಿಕ್ಷಣ ನೀಡುವ ಯೋಜನೆಯನ್ನು ಮಂಜೂರು ಮಾಡಿದೆ. ಅಂದರೆ ಈ ವಿದ್ಯಾರ್ಥಿಗಳು ಟ್ಯೂಷನ್ ಫೀ, ಸ್ಪೆಷಿಯಲ್ ಫೀ, ಪರೀಕ್ಷಾ ಫೀ, ಆಟ ಮತ್ತು ವಾಚನಾಲಯ ಫೀ ಮುಂತಾದವುಗಳನ್ನು ಕೊಡಬೇಕಾದುದಿಲ್ಲ. ಪ್ರಾಥಮಿಕ ಮಾಧ್ಯಮಿಕ ಶಾಲೆಗಳಲ್ಲೂ ತರಬೇತಿ (ಟ್ರೈನಿಂಗ್) ಶಾಲೆಗಳಲ್ಲೂ ಓದುವ ವಿದ್ಯಾರ್ಥಿಗಳಿಗೆಲ್ಲ ಈ ಸೌಲಭ್ಯ ದೊರೆಯುತ್ತದೆ.

ತಿಂಗಳಿಗೆ ರೂ. 30 ಷೆಡ್ಯೂಲ್ಡ್ ವರ್ಗದ ವಿದ್ಯಾರ್ಥಿಗಳಿಗೂ, ರೂ. 25ರಿಂದ 30ರ ವರೆಗೆ ಕುಡುಂಬಿಗಳಿಗೂ, ಮತಾಂತರಿತ ಕ್ರಿಶ್ಚಿಯನರಿಗೆ ರೂ. 50ರಿಂದ 30ರ ವರೆಗೂ ಸ್ಟೈಪೆಂಡ್‌ನ್ನೂ ಮೊದಲನೆಯ ವರುಷ ಪ್ರತಿಯೊಂದು ತರಗತಿಯ ಕಾಲಕ್ಕೂ ಕೊಡಲಾಗುವುದು

ಮೇಲ್ಕಾಣಿಸಿದ ವರ್ಗಗಳಿಂದ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಎರಡನೆಯ ವರುಷ ಕಟ್ಟುವ ವಿದ್ಯಾರ್ಥಿಗಳು ಸರಿಯಾದ ಸರ್ಟಿಫಿಕೇಟುಗಳನ್ನು ಒಪ್ಪಿಸಿದರೆ ಅವರಿಂದ ಪರೀಕ್ಷೆಯ ಫೀಜನ್ನು ವಸೂಲು ಮಾಡಲಾಗುವುದಿಲ್ಲ.

ಮಲಬಾರ್ ಪ್ರದೇಶದಲ್ಲಿಯ ತರಬೇತಿ ಕೇಂದ್ರಗಳಿಗೆ ಚುನಾಯಿಸಲ್ಪಟ್ಟ ಹಿಂದುಳಿದ ವರ್ಗಗಳವರಿಗೆ, ಹಿಂದುಳಿದ ಬುಡಕಟ್ಟಿನವರಿಗೆ, ಕುಡುಂಬಿಗಳಿಗೆ ಅವರು ಶಿಕ್ಷಣ ಶಾಖೆಯಿಂದ ಸ್ಟೈಪೆಂಡ ಪಡುವವರಾಗಿದ್ದರೆ ಅವರಿಗೂ ಧನಸಹಾಯ ನೀಡಲಾಗುವುದು.

ವರುಷಕ್ಕೆ ರೂ 900ಗಳು ಮಾತ್ರ ಉತ್ಪನ್ನವಿರುವ ಹಿಂದುಳಿದ ವರ್ಗದವರ ವಿದಾರ್ಥಿಗಳಿಗೆ ಆಟದ ಫೀಯನ್ನು ಮಾತ್ರ ಬಿಟ್ಟು ಎಲ್ಲಾ ಫೀಗಳನ್ನೂ ಮಾಫಿ ಮಾಡಲಾಗುವುದು.

"ಗಮನಾರ್ಹ ಅಭಿವೃದ್ಧಿ"

ಎಸ್. ಕೆ. ಡೇಯವರ ಹೇಳಿಕೆ

"ಇಂದು ಅಗತ್ಯವಾಗಿರುವ ಅಧಿಕ ಉತ್ಪಾದನೆ, ಗ್ರಾಮ ಕೈಗಾರಿಕೆಗಳ ಅಭಿವೃದ್ಧಿ, ಪಶುಸಂಗೋಪನೆಯಲ್ಲಿ ಪ್ರಗತಿ ಮುಂತಾದುವುಗಳಲ್ಲಿ ಕೇರಳವು ಬೇರೆಲ್ಲ ರಾಜ್ಯಗಳಿಗಿಂತಲೂ ಹೆಚ್ಚು ಪ್ರಗತಿಯನ್ನು ಸಾಧಿಸಿದೆ" ಎಂಬುದಾಗಿ ಕೇಂದ್ರದ ಸಮಾಜಾಭಿವೃದ್ಧಿ ಶಾಖೆಯ ಸಚಿವರಾದ ಶ್ರೀ ಎಸ್. ಕೆ. ಡೇಯವರು ನಾಲ್ಕು ದಿನಗಳ "ಕಣ್ಣಾರೆ ಕಂಡ" ಸಂಚಾರದ ಬಳಿಕ ಕೇರಳದ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಕೇರಳದ ಮುಖ್ಯ ಮಂತ್ರಿಗಳ ನೇತೃತ್ವದಲ್ಲಿ ರೂಪುಗೊಂಡಿರುವ ಆಡಳಿತ ಸುಧಾರಣಾ ಸಮಿತಿಯ ವಿಚಾರವನ್ನು ಪ್ರಸ್ತಾಪಿಸುತ್ತಾ ಶ್ರೀ ಡೇ ಅವರು "ಸಮಿತಿಯ ಯೋಜನೆ, ಕಾರ್ಯಸಂಪರ್ಕಗಳು ನನ್ನ ವೈಯಕ್ತಿಕ ವಿಚಾರಕ್ಕೂ ಸರಿಹೊಂದುವುದನ್ನು ಕಂಡು ನನಗೆ ಸಂತೋಷವಾಯಿತು" ಎಂದಿದ್ದಾರೆ.

"ನಾನು ಕಣ್ಣಾರೆ ಕಂಡಹಾಗೆ, ಅಧಿಕಾರಿಗಳು ಮತ್ತು ಅಧಿಕಾರಿಗಳಲ್ಲದವರು ಇವರೊಂದಿಗೆ ಸಾತ್ರಕಶಿ ನಡಿಸಿ ತಿಳಿದುಕೊಂಡಿರುವ ಹಾಗೆ ಕಳೆದ ಏಳು ತಿಂಗಳಿನಿಂದಲೂ ರಾಜ್ಯದ ಸಮಾಜಾಭಿವೃದ್ಧಿ ಯೋಜನೆಯಲ್ಲಿ ಎಲ್ಲಿಯೂ ಕ್ಷೀಣತೆ ಕಂಡುಬಂದಿಲ್ಲ.... ಅತ್ಯಂತ ಸಂತೋಷದ ವಿಚಾರವೆಂದರೆ ಸರಕಾರದ ಶಾಖೆಗಳಲ್ಲಿ ಜನರ ಅವಶ್ಯಕತೆಗೆ ದುಡಿಯುವ ಚೈತನ್ಯ ಸಜೀವವಾಗಿದೆ ಮತ್ತು ಹೆಚ್ಚು ಸ್ಪರ್ಧಾತ್ಮಕವಾಗಿದೆ. ಸರಕಾರದ ಸಂಘಟನೆಯಲ್ಲಿರುವ ದೌರ್ಬಲ್ಯಗಳನ್ನು ತೊಡೆದುಹಾಕಲು ಅವರು ಹೆಚ್ಚು ಆಸಕ್ತರಾಗಿದ್ದಾರೆ ಮತ್ತು ಅಭಿವೃದ್ಧಿ ಯೋಜನೆಗಳಲ್ಲಿ ಸ್ಪರ್ಧೆಯಿಂದ ಕೆಲಸ ಮಾಡುತ್ತಿದ್ದಾರೆ".

ಸಹಕಾರಿ ಬೇಸಾಯ

ಕೇರಳ ಸರ್ಕಾರವು ತನ್ನ ರಾಜ್ಯದಲ್ಲಿ ಸಹಕಾರೀ ತಳಹದಿಯ ಮೇಲೆ ಬೇಸಾಯವನ್ನಾರಂಭಿಸುವ ಯೋಜನೆಗೆ ಮನ್ನಣೆ ನೀಡಿದೆ.

ಈ ವರುಷ ರಾಷ್ಟ್ರೀಯ ವಿಸ್ತರಣ ಯೋಜನೆಗೊಳಪಟ್ಟ ಪ್ರದೇಶಗಳಲ್ಲಿ ಪ್ರಯೋಗಿಕವಾಗಿ 50 ಜಂಟಿ ಬೇಸಾಯದ ಸೊಸೈಟಿಗಳು ವ್ಯವಸ್ಥೆಗೊಳಿಸಲ್ಪಡುವುವು.

ತುರ್ತು ಈ ಸೊಸೈಟಿ ಕ್ಷೇತ್ರಗಳಲ್ಲಿ ಬತ್ತವನ್ನು ಮಾತ್ರ ಬೆಳೆಯಲಾಗುತ್ತದೆ. ಪ್ರತಿಯೊಂದು ಸೊಸೈಟಿಗೆ 20 ಎಕ್ರೆಗಿಂತ ಕಡಿಮೆ ಭೂಮಿ ಇರದು ಮತ್ತು ಶೇ. 75 ರಷ್ಟು ಸ್ವಯಂ ಪ್ರೇರಿತ ರೈತರು ಇದರಲ್ಲಿರುತ್ತಾರೆ.

ಒಂದು ಸೊಸೈಟಿಯಲ್ಲಿಯ ಸದಸ್ಯತ್ವದ ಸಂಖ್ಯೆ 25 ಇರುತ್ತದೆ. ಜಮೀನಿನಲ್ಲಿ ನೇರ ಆಸಕ್ತಿ ಇದ್ದವರು, ಅಂದರೆ ಭೂಮಾಲೀಕರು, ರೈತರು, ಗೇಣಿದಾರರು ಇಂಥವರು ಮಾತ್ರ ಸದಸ್ಯರಾಗಬಹುದು. "ಸಹಾನುಭೂತಿ"ಗಳಿಗೆ ಇಲ್ಲಿ ಅವಕಾಶವಿಲ್ಲ.

ಪ್ರತಿಯೊಂದು ಸೊಸೈಟಿಯಲ್ಲಿ ರೂ. 500 ಪೇಡ್ ಅಪ್ ಷೇರು ಬಂಡವಾಳವಿರುತ್ತದೆ. ಸೊಸೈಟಿಯವರು ಪಡೆಯಬಹುದಾದ ಭೂಮಿಯ ಕ್ಷೇತ್ರದ ಮೇಲೆ ಷೇರುಗಳ ಸಂಖ್ಯೆ ಅವಲಂಬಿಸಿರುತ್ತದೆ. ಪ್ರತಿಯೊಂದು ಷೇರಿನ ಬೆಲೆ 10 ರೂಪಾಯಿಗಳಿದ್ದು ಪ್ರತಿ 25 ಎಕ್ರೆಗೂ ಹಿಡುವಳಿಗೂ 10 ರೂ. ಷೇರ್ ಮೌಲ್ಯವನ್ನು ಕೊಡಬೇಕು.

ಸೊಸೈಟಿಗಳು ಸರ್ಕಾರದಿಂದ ಸಾಲ ಪಡೆಯಲು ಅರ್ಹವಾಗಿವೆಯಷ್ಟೇ ಅಲ್ಲದೆ ಸ್ಟೇಟ್ ಕೋ ಆಪರೇಟಿವ್ ಬೇಂಕ್‌ಗಳಿಂದಲೂ ಸಾಲ ಪಡೆಯುತ್ತವೆ. ಮೊದಲ ವರುಷ ಸರ್ಕಾರ 250ರಿಂದ 500ರ ವರೆಗೆ ಗ್ರಾಂಟ್ ಹಣವನ್ನು ಸಹಾಯಕ್ಕೆಂದು ಕೊಡುವುದು.

ಕಾರ್ಯದರ್ಶಿ ಮತ್ತು ಅಧ್ಯಕ್ಷರನ್ನೊಳಗೊಂಡು ಒಂಭತ್ತು ಜನರ ಸಮಿತಿಯೊಂದು ಸೊಸೈಟಿಯ ಆಡಳಿತವನ್ನು ನೋಡಿಕೊಳ್ಳುವುದು. ಮೂರನೆಯ ಸದಸ್ಯರನ್ನು ರೆಜಿಸ್ಟ್ರಾರ್‌ರವರು ನಾಮಕರಣ ಮಾಡುತ್ತಾರೆ. ಈ ಸಮಿತಿಯು ನಿತ್ಯ ನಡೆಯುವ ಬೇಸಾಯದ ಚಟುವಟಿಕೆಗಳನ್ನು ಪರಿಶೀಲಿಸಲು ಸೂಪರ್‌ವೈಜರುಗಳನ್ನು ನಿಯಮಿಸಬಹುದು.

ದಬ್ಬಾಳಿಕೆಯ ವಿರುದ್ಧ ಪ್ರತಿಭಟನೆ

ಚಿಕ್ಕಲಾಲ್‌ಬಾಗಿನಲ್ಲಿ ನಡೆದ ಕಾರ್ಮಿಕರ ಬಹಿರಂಗ ಸಭೆ

ತಾ. 19-6-58ರಂದು ಸಾಯಂಕಾಲ 6 ಘಂಟೆಗೆ ಚಿಕ್ಕಲಾಲ್‌ಬಾಗಿನಲ್ಲಿ ಕರ್ನಾಟಕ ಪ್ರಾಂತೀಯ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಆಶ್ರಯದಲ್ಲಿ ಬಹಿರಂಗ ಸಭೆ ನಡೆಯಿತು. ಬೆಂಗಳೂರು ಸಿಲ್ಕ್ ಕೆಲಸಗಾರರು ಮತ್ತು ಯಶವಂತಪುರದ ಗ್ರೂಪ್ ಟ್ರೇಡ್ ಯೂನಿಯನ್ನಿನ ಕಾರ್ಮಿಕರು ಬೆಂಗಳೂರಿನ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಹೊರಟು ಚಿಕ್ಕಲಾಲ್‌ಬಾಗಿಗೆ ಬಂದು ಸೇರಿದರು.

ಸಭೆಯ ಅಧ್ಯಕ್ಷತೆಯನ್ನು ಕರ್ನಾಟಕ ಪ್ರಾಂತೀಯ ರೈತ ಸಂಘದ ಕಾರ್ಯದರ್ಶಿಗಳೂ, ಮಾಜಿ ಪಾರ್ಲಿಮೆಂಟಿನ ಸದಸ್ಯರೂ ಆದ ಕಾಂ| ಬಿ. ವಿ. ಕಕ್ಕಿಲ್ಲಾಯರವರು ವಹಿಸಿದ್ದರು. ದೇಶಾದ್ಯಂತ ಮುಷ್ಕರ ಹೂಡಿರುವ ಡಾಕ್ ಮತ್ತು ಬಂದರು ಕಾರ್ಮಿಕರು ಶಾಂತಿ, ಶಿಸ್ತುಗಳಿಂದ ನಡೆಸುತ್ತಿರುವ ಮುಷ್ಕರಕ್ಕೆ ಬೆಂಬಲ ನೀಡಲು ಮತ್ತು ವಿನಾಕಾರಣವಾಗಿ ಮದ್ರಾಸಿನಲ್ಲಿ ಕಾರ್ಮಿಕರ ಮೇಲೆ ಗೋಲೀಬಾರು ಮಾಡಿದ್ದನ್ನು ಪ್ರತಿಭಟಿಸಲು ಮತ್ತು ವೃದ್ಧ ಪಿತಾಮಹ ಚಕ್ಕರೈ ಚೆಟ್ಟಿಯಾರರ ನಿಧನದ ಸಲುವಾಗಿ ಸಂತಾಪ ಸೂಚಿಸಲು ಕರೆಯಲಾಗಿದ್ದ ಸಭೆಯಲ್ಲಿ, ಶಾಸನ ಸಭಾ ಸದಸ್ಯರಾದ ಕಾಂ| ಎಂ. ಸಿ. ನರಸಿಂಹನ್‌ರವರೂ, ಕಾ|| ಐ ಮುರಿದಾಸ್‌ರವರೂ, ಕಾ| ಎಸ್. ಸೂರ್ಯನಾರಾಯಣರಾಯರೂ ಮತ್ತು ಅಣ್ಣಯ್ಯಪ್ಪನವರೂ ಮಾತಾಡಿ, ಮದ್ರಾಸಿನಲ್ಲಿ ಪೋಲೀಸರು ಗೋಲೀಬಾರು ಮಾಡಿದ್ದನ್ನು ತೀವ್ರವಾಗಿ ಖಂಡಿಸಿದರು. ಕಾ| ನರಸಿಂಹನ್‌ರವರು ಮುಂದುವರಿದು ಚಕ್ಕರೈ ಚೆಟ್ಟಿಯಾರರು ಕಾರ್ಮಿಕರ ಐಕ್ಯತೆಗೆ ದುಡಿದ ಭಾರತದ ಮೊದಲನೆಯ ಕಾರ್ಮಿಕ ಮುಂದಾಳುಗಳಲ್ಲೊಬ್ಬರೆಂದೂ ಅವರ ಅಮರ ಸೇವೆಯನ್ನು ಕಾರ್ಮಿಕ ವರ್ಗ ಎಂದೆಂದಿಗೂ ಮರೆಯುವಹಾಗಿಲ್ಲವೆಂತಲೂ ಹೇಳಿದರು. ಕಾರ್ಮಿಕರ ಮೇಲೆ ಗೋಲೀಬಾರ್ ನಡೆಸಿ 9 ಜನರನ್ನು ಗುಂಡಿಟ್ಟು ಕೊಂದ ಸರ್ಕಾರದ ನೀತಿಯನ್ನು ಎಲ್ಲರೂ ಖಂಡಿಸಿದರು.

ಅಧ್ಯಕ್ಷರು ಮಾತನಾಡಿ ದೇಶದ ಆರ್ಥಿಕ ಸ್ಥಿತಿಯು ಉತ್ತಮವಾಗಬೇಕಾಗಿರುವ ಕಾಲದಲ್ಲಿ, ದೇಶದ ಕೈಗಾರಿಕೆ ಬೆಳೆಯಬೇಕಾಗಿರುವ ಕಾಲದಲ್ಲಿ ದೇಶದ ಬೆನ್ನುಮೂಳೆಯಂತಿರುವ ಕಾರ್ಮಿಕರು ಮತ್ತು ರೈತರ ಮೇಲೆ ಈ ರೀತಿ ಹಲ್ಲೆ ನಡೆಯುತ್ತಿರುವುದು ಸರ್ಕಾರದ ನೀತಿಯನ್ನು ತೋರಿಸುತ್ತದೆ ಎಂಬುದಾಗಿ ತೀವ್ರವಾಗಿ ಖಂಡಿಸಿದರು.

ಸಭೆಯಲ್ಲಿ ಈ ಕೆಳಕಂಡ ನಿರ್ಣಯಗಳು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟವು:

● ಭಾರತದ ಕಾರ್ಮಿಕ ಚಳುವಳಿಯ ಆದಿಪುರುಷರಲ್ಲೊಬ್ಬರೂ ತಮ್ಮ ಜೀವಮಾನವೆಲ್ಲಾ ಕಾರ್ಮಿಕ ಸಂಘಟನೆ ಹಾಗೂ ಐಕ್ಯತೆಯ ಸಲುವಾಗಿ ಮುಡಿಪಾಗಿಟ್ಟು ದುಡಿದವರೂ ಆದ ಶ್ರೀ ಚಕ್ಕರೈ ಚೆಟ್ಟಿಯಾರರ ಅಕಾಲ ನಿಧನದ ಬಗ್ಗೆ ಈ ಸಭೆಯು ಸಂತಾಪಪಡುತ್ತದೆ. ತಮಿಳುನಾಡು ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿಗೂ, ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿಗೂ, ಮೃತರ ಕುಟುಂಬಕ್ಕೂ ಈ ಸಭೆಯು ತನ್ನ ಅನುತಾಪವನ್ನು ತಿಳಿಸುತ್ತದೆ. ಶ್ರೀ ಚಕ್ಕರೈ ಚೆಟ್ಟಿಯಾರರು ಆಜೀವ ಪರ್ಯಂತ ಸಾಧಿಸಲು ಯತ್ನಿಸಿರುವ ಕಾರ್ಮಿಕ ವರ್ಗದ ಐಕ್ಯತೆ ಮತ್ತು ಹಿತಸಾಧನೆಯ ಸಲುವಾಗಿ ಇಮ್ಮಡಿ ಹುಮ್ಮಸ್ಸಿನಿಂದ ದುಡಿಯುವ ಪ್ರತಿಜ್ಞೆಯೊಂದಿಗೆ ಅವರಿಗೆ ಈ ಸಭೆಯು ಶ್ರದ್ಧಾಂಜಲಿಗಳನ್ನು ಅರ್ಪಿಸುತ್ತದೆ.

● ನ್ಯಾಯವಾದ ಕೇಳಿಕೆಗಳ ಸಲುವಾಗಿ ನಾಲ್ಕು ವರ್ಷಗಳಿಂದ ಕಾದು ಸರಕಾರದ ನಿಧಾನ ಮನೋವೃತ್ತಿಯ ಕಾರಣ ಬೇರೆ ದಾರಿ ಇಲ್ಲದೆ ಸಂಪೂರ್ಣ ಐಕ್ಯತೆಯಿಂದಲೂ, ಶಾಂತವಾಗಿಯೂ ಯಶಸ್ವೀ ಮುಷ್ಕರ ನಡೆಸುತ್ತಿರುವ ಇಡೀ ದೇಶದ ಬಂದರು ಕೆಲಸಗಾರರನ್ನು ಈ ಸಭೆಯು ಅಭಿನಂದಿಸುತ್ತದೆ. ಮುಷ್ಕರ ಹೂಡಿರುವ ಕೆಲಸಗಾರರ ಮೇಲೆ ವಿನಾ ಕಾರಣ ಹಲ್ಲೆ, ಗೋಲೀಬಾರು ನಡೆಸಿ ಹನ್ನೆರಡು ವರ್ಷದ ಒಬ್ಬ ಬಾಲಕನ ಸಮೇತವಾಗಿ ಒಂಬತ್ತು ಮಂದಿಯನ್ನು ಕೊಂದುಹಾಕಿರುವ ಮದ್ರಾಸ್ ಸರ್ಕಾರದ ರಾಕ್ಷಸೀ ವರ್ತನೆಯನ್ನು ಈ ಸಭೆಯು ತೀವ್ರವಾಗಿ ಖಂಡಿಸುತ್ತದೆ. ಗೋಲೀಬಾರಿನ ಬಗ್ಗೆ ಬಹಿರಂಗ ವಿಚಾರಣೆ ನಡೆಯಬೇಕು, ಮೃತರ ಕುಟುಂಬಗಳಿಗೆ ಸರಕಾರ ಪರಿಹಾರ ಕೊಡಬೇಕು, ಬಂದರು ಕೆಲಸಗಾರರ ಬೇಡಿಕೆಗಳನ್ನು ಮಾನ್ಯ ಮಾಡಬೇಕು ಎಂದು ಈ ಸಭೆಯು ಮದ್ರಾಸ್ ಸರ್ಕಾರವನ್ನೂ ಕೇಂದ್ರ ಸರ್ಕಾರವನ್ನೂ ಒತ್ತಾಯ ಮಾಡುತ್ತದೆ.

ಮಂಗಳೂರು—
ಬಂದರ ಕೆಲಸಗಾರರ ಸಭೆ

ತಾ. 16—6—58ರಂದು ಬಂದರ ಕೆಲಸಗಾರರ ಸಂಘದ ಆಫೀಸಿನಲ್ಲಿ ಸಾರ್ವಜನಿಕ ಸಭೆಯು, ಶ್ರೀ ಎ. ಶಾಂತಾರಾಮ ಪೈಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಭೆಯಲ್ಲಿ ಅಖಿಲ ಭಾರತ ಬಂದರ ಮತ್ತು ಧಕ್ಕೆ ಕೆಲಸಗಾರರ ಕೇಳಿಕೆಗಳ ಕುರಿತು ಶ್ರೀ ಜೋಸೆಫ್ ಮತ್ತು ಸಂಘದ ಕಾರ್ಯದರ್ಶಿಯವರು ವಿವರಿಸಿದರು.

ಆ ಬಳಿಕ ಅಧ್ಯಕ್ಷರು ಅಖಿಲ ಭಾರತ ಬಂದರು ಮತ್ತು ಧಕ್ಕೆ ಕೆಲಸಗಾರರು ಹೂಡಿರುವ ಮುಷ್ಕರಕ್ಕೆ ಮಂಗಳೂರು ಬಂದರದ ಎಲ್ಲಾ ಮಜೂರರೂ ಬೆಂಬಲ ನೀಡಬೇಕೆನ್ನುವ, ಮತ್ತು ಅವರ ನ್ಯಾಯವಾದ ಕೇಳಿಕೆಗಳನ್ನು ಈಡೇರಿಸುವಂತೆ ಸರಕಾರವನ್ನು ಒತ್ತಾಯಿಸುವ,

ಮಂಗಳೂರು ಬಂದರದಲ್ಲಿ ವರುಷವಿಡೀ ಕೆಲಸ ಸಿಗುವಂತಾಗಬೇಕೆನ್ನುವ, ಮಳೆಗಾಲದಲ್ಲಿ ನಿರುದ್ಯೋಗವಿರುವಾಗ ಯೋಗ್ಯ ಪರಿಹಾರ ಸಿಗಬೇಕೆನ್ನುವ, ಕೂಲಿ ಹೆಚ್ಚಳವಾಗಬೇಕೆನ್ನುವ, ಕೆಲಸದ ಭದ್ರತೆ ಇರಬೇಕೆನ್ನುವ, ಕೆಲಸದ ವೇಳೆ ಅಪಘಾತಗಳಾದರೆ ಪರಿಹಾರ ಸಿಗಬೇಕೆನ್ನುವ, ಕೇಳಿಕೆಗಳನ್ನೊಳಗೊಂಡ ಠರಾವಿನ ಕುರಿತು ಭಾಷಣ ಮಾಡಿದರು, ಠರಾವು ಸರ್ವಾನುಮತದಿಂದ ಮಂಜೂರಾದವು.

ಬಳ್ಳಾರಿ—
ಮುನಿಸಿಪಲ್ ಕೆಲಸಗಾರರ ವಿಜಯ

ಬಳ್ಳಾರಿ ಮುನಿಸಿಪಲ್ ಕಾರ್ಮಿಕರು ತಮ್ಮ ನ್ಯಾಯವಾದ ಬೇಡಿಕೆಗಳಾದ—

2 ರೂಪಾಯಿಗಳ ಮನೆ ಬಾಡಿಗೆ ಭತ್ತೆಯನ್ನು 1—1—57ರಿಂದ ನಿಲ್ಲಿಸಿದ್ದನ್ನು ಪುನಃ ಜಾರಿಯಲ್ಲಿ ತಂದು ತಮಗೆ ತಾ. 1—1—57ರಿಂದ ಇಂದಿನ ವರೆವಿಗೂ ಕೊಡಬೇಕ,

1852ರಲ್ಲಿ ಸಂಪು ಮಾಡಿ ಕಾರ್ಮಿಕರಿಗೆ ಯೂನಿಫಾರಂ ಅಲೋಯೆನ್ಸ್ ವರುಷಕ್ಕೆ 24 ರೂಪಾಯಿಯಂತೆ ಕೊಡಬೇಕು

ಕಾರ್ಮಿಕರ ಸಂಖ್ಯೆಯನ್ನು ಪಟ್ಟಣದ ವಿಸ್ತಾರ, ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚಿಸಬೇಕು

ತಮಗೆ ಕಾನೂನಿನ ಪ್ರಕಾರ ಬರಬೇಕಾದ ಇಕ್ರಿಮೆಂಟನ್ನು ಕೊಡಬೇಕು

2 ವರುಷಗಳ ಸರ್ವಿಸು ಆದ ಎಲ್ಲ ಕಾರ್ಮಿಕರನ್ನು ಕನ್‌ಫರ್ಮ್ ಮಾಡಬೇಕು

ತಮ್ಮ ಗುಬ್ಬಿ ಗೂಡಿನಂತಿರುವ ಮನೆಗಳ ಮೇಲೆ ಹೊಸದಾಗಿ ಗುತ್ತಿಗೆಗಳನ್ನು ಹಾಕಿದ್ದನ್ನು ರದ್ದು ಮಾಡಬೇಕು

ಮುಷ್ಕರವನ್ನು ತಾ. 15—6—58ರಿಂದ ಪ್ರಾರಂಭ ಮಾಡಿದ್ದರು. ಮುಷ್ಕರದ ನೋಟೀಸನ್ನು ಕೊಡುವ ಮುಂಚೆ ಕಾರ್ಮಿಕರು ಹಲವಾರು ವೇಳೆ ತಮ್ಮ ಬೇಡಿಕೆಗಳನ್ನು ಮುನಿಸಿಪಲ್ ಅಧಿಕಾರಿಗಳ ಮುಂದೆ ಮತ್ತು ಡೆಪ್ಯೂಟಿ ಕಮೀಷನರ‌ವರ ಮುಂದೆ ಮಂಡಿಸಿದರು ಆದರೆ ಅಧಿಕಾರಿಗಳು ಕಾರ್ಮಿಕರ ಮೊರೆಯನ್ನು ನಿರ್ಲಕ್ಷಿಸಿದರು. ಕಾರಣ ಕಾರ್ಮಿಕರು ಗತ್ಯಂತರವಿಲ್ಲದೆ ಸಂಪನ್ನು ಹೂಡಬೇಕಾಯಿತು. ಸಂಪಿನಲ್ಲಿ ಪ್ರತಿಯೊಬ್ಬ ಕಾರ್ಮಿಕನು ಭಾಗವಹಿಸಿದ್ದನು. ತಾ. 15—6—58ರಂದು ಊರಿನ ಮೂಲೆ ಮೂಲೆಯಲ್ಲಿ ಸಂಪನ್ನು ಘೋಷಿಸುವ 'ಪೋಸ್ಟರ್'ಗಳನ್ನು ಕಾಣಬಹುದಾಗಿತ್ತು. ಸಾಯಂಕಾಲ ಸಾಂಬಮೂರ್ತಿ ಮೈದಾನದಲ್ಲಿ ಬಹಿರಂಗ ಸಭೆ ಸೇರಿ ಈ ನ್ಯಾಯವಾದ ಹೋರಾಟವನ್ನು ಜನತೆ ಬಲಪಡಿಸಬೇಕೆಂದು ಕೇಳಿಕೊಳ್ಳಲಾಯಿತು. ಕಾ|| ಅರವಿಂದರು ಮಾತನಾಡಿದರು. ಸಭೆಗೆ ಶ್ರೀ ಎಂ. ದಾಸಪ್ಪ M.L.A. ಇವರು ಅಧ್ಯಕ್ಷತೆಯನ್ನು ವಹಿಸಿದ್ದರು.

15 ಮತ್ತು 16 ದಿನಾಂಕಗಳ ಎರಡು ದಿನಗಳ ಯಶಸ್ವಿ ಸಂಪಿನ ನಂತರ ಮುನಿಸಿಪಲ್ ಅಧಿಕಾರಿಗಳು ಪುರಪ್ರಮುಖರ ಮತ್ತು ಕಾರ್ಮಿಕರ ಪರವಾಗಿ ಕಾ|| ದಾನಪ್ಪ ಅರವಿಂದ್, ರಾಮಪ್ಪ, ತಿಪ್ಪಯ್ಯ ಮತ್ತು ನಾರಾಯಣ ಇವರನ್ನೊಳಗೊಂಡ ಸಮಿತಿಯೊಂದನ್ನು ರಚಿಸಿ ಇವರ ಸೂಚನೆಯ ಮೇರೆಗೆ ಮುನಿಸಿಪಲ್ ಅಧಿಕಾರಿಗಳು ವರ್ತಿಸಬೇಕೆಂದು ನಿರ್ಣಯಿಸಲಾಯಿತು. ಮೇಲ್ಕಾಣಿಸಿದ ಸಮಿತಿಯು ನಿರ್ಣಯಕ್ಕೆ ಬಂದ ನಂತರ ಮುಷ್ಕರವನ್ನು ಹಿಂತೆಗೆದುಕೊಳ್ಳಲಾಯಿತು. ಈ ಒಪ್ಪಂದದ ಪ್ರಕಾರ—

ಕಾರ್ಮಿಕರಿಗೆ 1—1—57ರಿಂದ ಇಂದಿನ ವರೆವಿಗೂ ತಿಂಗಳಿಗೆ 3/- ರೂ. ಪ್ರಕಾರ ಮನೆಬಾಡಿಗೆ ಅಲವೆನ್ಸ್ ಕೊಡಬೇಕು

ಕಾರ್ಮಿಕರಿಗೆ 1—1—57ರಿಂದ 1—1—58ರ ವರೆವಿಗೂ ಯೂನಿಫಾರಂ ಅಲವೆನ್ಸ್ 24 ರೂ. ಕೊಡಬೇಕಾಗಿ—ಅದಕ್ಕಾಗಿ ಸರ್ಕಾರದಿಂದ ಸ್ಯಾಂಕ್ಷನ್ ತರಬೇಕೆಂದು 58ನೇ ಇಸ್ವಿಯಿಂದ ಪ್ರತಿ ವರ್ಷ ಕಾರ್ಮಿಕರಿಗೆ 24 ರೂಪಾಯಿಗಳಷ್ಟು ಬಟ್ಟೆಗಳನ್ನು ಕೊಡಬೇಕು

ಕಾರ್ಮಿಕರ ಸಂಖ್ಯೆಯನ್ನು 40ರಷ್ಟು ಜಾಸ್ತಿ ಮಾಡಬೇಕು

ಹೀಗೆ ಜಾಸ್ತಿ ಮಾಡಿದ ಸಂಖ್ಯೆಯಷ್ಟು ಕಾರ್ಮಿಕರನ್ನು ಕನ್‌ಫರ್ಮ್ ಮಾಡಬೇಕು

ಸರಕಾರದಿಂದ "ಆಲೋಕೇಷನ್ ಸರ್ಟಿಫಿಕೇಟು"ಗಳು ಬಂದ ತಕ್ಷಣ ಇನ್‌ಕ್ರಿಮೆಂಟ್‌ಗಳನ್ನು ಕೊಡಬೇಕೆಂದು ಆ ಸರ್ಟಿಫಿಕೇಟುಗಳು 15 ದಿನಗಳ ಒಳಗಾಗಿ ತರಿಸಲು ಪ್ರಯತ್ನಿಸಬೇಕು

ಮನೆಗುತ್ತಿಗೆಗಳನ್ನು ರದ್ದು ಮಾಡುವ ಅಧಿಕಾರವನ್ನು ಸರ್ಕಾರದಿಂದ ಪಡೆದು ಮಾಫಿ ಮಾಡಬೇಕು ಎಂಬ ತೀರ್ಮಾನಗಳಾದುವು.

ಈ ತೀರ್ಮಾನಗಳ ಮೇರೆಗೆ ಸಂಪನ್ನು ಹಿಂತೆಗೆದುಕೊಳ್ಳಲಾಯಿತು.

ಇದು ಕಾರ್ಮಿಕರ ಎರಡನೇ ವಿಜಯ.

ಉಪವಾಸ ಮುಷ್ಕರದತ್ತ ರೇಷ್ಮೆ ಕಾರ್ಮಿಕರು

ತಾ. 18—6—58ರಲ್ಲಿ ಮೈಸೂರು ಡಿಸ್ಟ್ರಿಕ್ಟ್ ಸಿಲ್ಕ್ ವರ್ಕರ್ಸ್ ಯೂನಿಯನ್ ಕಾರ್ಯಕಾರಿ ಸಮಿತಿ ಶ್ರೀ ಎಂ ಎಲ್. ಉಗ್ರಪ್ಪನವರ ಅಧ್ಯಕ್ಷತೆಯಲ್ಲಿ ಸೇರಿ ತಾ. 5—11—57ರಲ್ಲಿ ಸಲ್ಲಿಸಿದ ಬೇಡಿಕೆಗಳ ಬಗ್ಗೆ ಇದುವರೆಗೂ ಯಾವ ಕನ್‌ಸಿಲಿಯೇಶನ್ ನಡೆಯದೆ ಇರುವುದರಿಂದಲೂ ಮತ್ತು ತಾ. 30—5—58ರಲ್ಲಿ ತಮ್ಮ ಬೇಡಿಕೆಗಳ ಇತ್ಯರ್ಥವಾಗದಿದ್ದಲ್ಲಿ ತಾ. 20—6—58ರಂದು ಉಪವಾಸ ಮುಷ್ಕರ ಹೂಡುವುದಾಗಿ ಅಸಿಸ್ಟೆಂಟ್ ಲೇಬರ್ ಕಮೀಷನರ್‌ರವರಿಗೆ ಪತ್ರ ಬರೆದಿದ್ದರೂ ಇದು ವರೆವಿಗೂ ಯಾವ ಜಬಾಬು ಬಾರದೆ ಇದ್ದ ಕಾರಣ ಸರ್ಕಾರದ ಕಾರ್ಮಿಕ ಧೋರಣೆಯನ್ನು ಖಂಡಿಸಿ ಕೊಳ್ಳೇಗಾಲದ ಗವರ್ನ್‌ಮೆಂಟ್ ಸಿಲ್ಕ್‌ಫಿಲೇಚರ್ ಮುಂಭಾಗದಲ್ಲಿ ಉಪವಾಸ ಮುಷ್ಕರ ನಡೆಸಬೇಕೆಂದು ತೀರ್ಮಾನಿಸಲಾಗಿದೆ.

ಪಾರ್ಟಿ ನಿಧಿಗೆ ಸಹಾಯ

ಮೈಸೂರು ಸಿಟಿ ಮುನಿಸಿಪಲ್ ಕೆಲಸಗಾರರ ಸಂಘದ ಉಪಾಧ್ಯಕ್ಷರಾದ ಶ್ರೀ ಚಿಕ್ಕಮಾರಯ್ಯನವರು ತಮ್ಮ ಮಗನ ಮದುವೆಯ ಸಂದರ್ಭದಲ್ಲಿ ಮೈಸೂರುಜಿಲ್ಲಾ ಕಮ್ಯೂನಿಸ್ಟ್ ಪಾರ್ಟಿಗೆ (5—0—0) ಐದು ರೂಪಾಯಿಗಳನ್ನೂ, ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಚಿಕ್ಕಮಾರನವರು ತಮ್ಮ ಮದುವೆಯ ಸಂದರ್ಭದಲ್ಲಿ (3—0—0) ಮೂರು ರೂಪಾಯಿಗಳನ್ನೂ ಕೊಟ್ಟ ಸಂಭಾವನೆಯನ್ನು ಹೃತ್ಪೂರ್ವಕವಾಗಿ ಸ್ವೀಕರಿಸಿದೆ.

ನಾರದ ವಾರ್ತಾ ಸಮೀಕ್ಷೆ

ಬಂದರು ನೌಕರರ ಮುಷ್ಕರ ಮುಕ್ತಾಯ

ಹತ್ತು ದಿನಗಳಿಂದ ನಡೆಯುತ್ತಿದ್ದ 150,000 ಬಂದರು ನೌಕರರ ಮುಷ್ಕರ ಇದೀಗ ಮುಗಿದಿದೆ. ಮದರಾಸಿನಲ್ಲಿ ನಡೆದ ಗೋಲೀಬಾರಿನ ಘಟನೆಯೊಂದನ್ನು ಬಿಟ್ಟಲ್ಲಿ, ಈವರೆಗೆ ಅಂಥ ಪ್ರಸಂಗ ನಡೆಯಲಿಲ್ಲ. ನೌಕರರು ದೃಢವಾದ ಐಕ್ಯತೆಯಿಂದ ತಮ್ಮ ಹೋರಾಟವನ್ನು ಶಾಂತ ರೀತಿಯಿಂದ ಸಾಗಿಸಿದರು. ಕರಿಗಾಲಿಗಳ ಮೂಲಕ ಮುಷ್ಕರ ಮುರಿಯಲು ಪಣತೊಟ್ಟಿರುವ ಕೇಂದ್ರ ಸಚಿವ ಎಸ್. ಕೆ. ಪಾಟೀಲರ ಯತ್ನಗಳಾವುವೂ ಸಾಗಲಿಲ್ಲ. ಮುಷ್ಕರ ನಡೆಸಿದ ನೌಕರರಿಗೆ ದೇಶಾದ್ಯಂತವೂ ಕಾರ್ಮಿಕರ ಮತ್ತು ಇತರೇ ವಿಭಾಗದ ಜನತೆಯ ಬೆಂಬಲವಿದೆ.

ಮನಾಲಿಯಿಂದ ದೆಹಲಿಗೆ ಹಿಂತಿರುಗಿರುವ ಪ್ರಧಾನಿ ನೆಹರೂರವರೊಂದಿಗೆ ಅಖಿಲ ಭಾರತ ಬಂದರು ನೌಕರರ ಫೆಡರೇಶನ್ನಿನ ನಾಯಕರುಗಳು ಸಮಾಲೋಚನೆ ನಡೆಸಿದರು. ಈ ಸಂಧಾನದ ಫಲವಾಗಿ ಮುಷ್ಕರ ಮುಕ್ತಾಯವಾಗಿದೆ. ಯಕರುಗಳಾದ ಶ್ರೀ ಎಸ್.ಎಂ. ಜೋಷಿ, ಎಸ್. ಎ. ಡಾಂಗೆ ಮತ್ತಿತರರು ನಡೆಸಿದ ಯತ್ನ ಸ್ತುತ್ಯಾರ್ಹವಾಗಿದೆ.

ಜಮ್‌ಷೆಡ್‌ಪುರದಲ್ಲಿ ಮುಷ್ಕರದ ಬಗ್ಗೆ ವಿಚಾರಣೆ

ಜಮ್‌ಷೆಡ್‌ಪುರದಲ್ಲಿ ಟಿಸ್ಕೋ ಕಾರ್ಖಾನೆಯಲ್ಲಿ ಇತ್ತೀಚೆಗೆ ನಡೆದ ಮುಷ್ಕರದ ಬಗ್ಗೆ ವಿಚಾರಣೆ ನಡೆಸಲು ಭಾರತ ಸರಕಾರ ಒಂದು ಸಮಿತಿಯನ್ನು ನೇಮಿಸಿದೆ. ಈ ಏಕ ಸದಸ್ಯ ಸಮಿತಿಗೆ ಕೇಂದ್ರ ಕಾರ್ಮಿಕ ಸಚಿವಾಲಯದ ಕಾರ್ಯದರ್ಶಿ ಶ್ರೀ ಆರ್. ಎಲ್. ಮೆಹ್ತಾರವರನ್ನು ನಿಯಮಿಸಲಾಗಿದೆ. ಸಮಿತಿಯು ಇತ್ತೀಚೆಗೆ ನೈನಿತಾಲ್‌ನಲ್ಲಿ ನಡೆದ ಲೇಬರ್ ಸಮ್ಮೇಳನವು ವಿವಿಧ ಸಂಘಗಳ ಬಗ್ಗೆ ಇರಬೇಕಾದ ಬಾಂಧವ್ಯದ ಬಗ್ಗೆ ಹಾಕಿರುವ ಮಾರ್ಗದರ್ಶನವನ್ನು ಗಮನದಲ್ಲಿರಿಸಿಕೊಂಡು ಪರಿಶೀಲಿಸುವುದಾಗಿ ತಿಳಿದು ಬಂದಿದೆ. ಸಮಿತಿಯು ಈಗಾಗಲೇ ತನ್ನ ಕಾರ್ಯವನ್ನು ಆರಂಭಿಸಿದೆ.

ಜೆಮ್‌ಷೆಡ್‌ಪುರ ಮಜ್ದೂರ್ ಯೂನಿಯನ್‌ನ ಕಾರ್ಯದರ್ಶಿ ಶ್ರೀ ಕೇದಾರ್ ದಾಸ್ (ಶಾಸನ ಸಭಾ ಸದಸ್ಯರು) ರವರ ಬಿಡುಗಡೆ ಇನ್ನೂ ಆಗಿಲ್ಲ. ಜಾಮೀನಿನ ಮೇಲೆ ಅವರನ್ನು ಬಿಡುಗಡೆ ಮಾಡಲು ಧನಬಾದ್ ಸೆಷನ್ಸ್ ಕೋರ್ಟಿನಲ್ಲಿ ಜುಲೈ 2 ರಂದು ಮೊಕದ್ದಮೆ ನಡೆಯಲಿದೆ.

ಮುಂಬಯಿ ಮುನಿಸಿಪಲ್ ನೌಕರರ ಮುಷ್ಕರ ಅಂತ್ಯ

ಮುಂಬಯಿಯ 39,000 ಮುನಿಸಿಪಲ್ ನೌಕರರ ಮುಷ್ಕರವು ಎಂಟು ದಿನಗಳ ಪರ್ಯಂತ ನಡೆದು ಅಂತ್ಯಗೊಂಡಿದೆ. ನೌಕರರ ಸಂಘದ ಪ್ರತಿನಿಧಿಗಳು ಮತ್ತು ಕಾರ್ಪೋರೇಷನ್ ಆಡಳಿತೆಗೂ ಸಂಬಳದಲ್ಲಿ ತಲಾ 5 ರೂ. ಹಾಗೂ 3 ರೂಗಳ ಹೆಚ್ಚಳದ ಬಗ್ಗೆ ಒಪ್ಪಂದವಾಗಿದೆ. ಮುಷ್ಕರವನ್ನು ಅಂತ್ಯಗೊಳಿಸಿ ಒಪ್ಪಂದಕ್ಕೆ ಬರಲು ಸಂಯುಕ್ತ ಮಹಾರಾಷ್ಟ್ರ ಸಮಿತಿಯ ನಾ

'ನಿರುದ್ಯೋಗವಿಲ್ಲದ ಚೀಣ'

ಲೋಕಸಭಾ ಸದಸ್ಯ ಬ್ರಹ್ಮಪ್ರಕಾಶರ ಅಭಿಪ್ರಾಯ

ಭಾರತ-ಚೀಣಾ ಮೈತ್ರಿ ಸಂಘದ ಪರವಾಗಿ ಸೌಹಾರ್ದ ನಿಯೋಗದ ನಾಯಕರಾಗಿ ಇತ್ತೀಚೆಗೆ ಚೀಣಾ ಪ್ರವಾಸ ಮಾಡಿದ ಶ್ರೀ ಬ್ರಹ್ಮ ಪ್ರಕಾಶರವರು ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸುತ್ತ "ಸೋಷಿಲಿಸ್ಟ್ ರಾಷ್ಟ್ರವಾದ ಚೀಣವು ಅತ್ಯಲ್ಪ ಅವಧಿಯಲ್ಲಿಯೇ ಭಾರತಕ್ಕಿಂತಲೂ ಹೆಚ್ಚು ಉಕ್ಕು ಮತ್ತು ವಿದ್ಯುಚ್ಛಕ್ತಿಯನ್ನು ಉತ್ಪಾದಿಸುತ್ತಿದೆ. ಅಲ್ಲಿ ನಿರುದ್ಯೋಗ ಇಲ್ಲವೇ ಇಲ್ಲ. ಕೈಗಾರಿಕೆ ಹಾಗೂ ವ್ಯವಸಾಯ ಕಾರ್ಮಿಕರ ಅಭಾವವಿದೆ ಎಂದು ಹೇಳಬಹುದು" ಎಂದು ತಿಳಿಸಿದ್ದಾರೆ.

ಮುಂದುವರೆದು ಅವರು ಕಾರ್ಮಿಕರಿಗೆ ತಿಂಗಳಿಗೆ ಎಂಭತ್ತು ರೂಪಾಯಿ ಕನಿಷ್ಠ ವೇತನ ದೊರೆಯುವುದೆಂದೂ, 25 ದಶಲಕ್ಷ ಕಾರ್ಮಿಕರಲ್ಲಿ ಐದರಲ್ಲಿ ಒಂದು ಭಾಗ ಕಾರ್ಮಿಕರಿಗೆ ಒಳ್ಳೆಯ ವಸತಿ ಸೌಕರ್ಯವಿದೆಯೆಂದೂ ತಿಳಿಸಿದರು. ಆಹಾರ ಹಾಗೂ ಒರಟು ಬಟ್ಟೆಗಳ ಬಗ್ಗೆ ದರಸೂಚಿ ಇದೆ ಎಂದೂ ಕಾರ್ಮಿಕರಲ್ಲಿ ಅತೃಪ್ತಿಯೇ ಇಲ್ಲವೆಂದೂ ಅವರು ತಿಳಿಸಿದರು.

ಕಾರ್ಖಾನೆ ಹಾಗೂ ಇತರ ಉದ್ಯೋಗ ಸಂಸ್ಥೆಗಳ ಮೇಲೆ ಹಸ್ತ ಪತ್ರಿಕೆಗಳು ಹಾಗೂ ಭಿತ್ತಿ ಫಲಕಗಳನ್ನು ಅಂಟಿಸುವುದರ ಮೂಲಕ ಆಡಳಿತ ಶಾಹಿಯನ್ನು ಟೀಕಿಸಲು ಕಾರ್ಮಿಕರಿಗೆ ಸ್ವಾತಂತ್ರ್ಯವಿತ್ತಿರುವ ಹೊಸ ವ್ಯವಸ್ಥೆಯಿಂದಾಗಿ ಲಂಚಗುಳಿತನ ಹಾಗೂ ಸ್ವಜನ ಪಕ್ಷಪಾತಕ್ಕೆ ಅಡ್ಡಿಯಾಗಿದೆ ಎಂದೂ ಅವರು ತಿಳಿಸಿದ್ದಾರೆ.

ಆಂಧ್ರ ವಿಧಾನ ಪರಿಷತ್ ಚುನಾವಣೆಯಲ್ಲಿ

ಕಮ್ಯೂನಿಸ್ಟರ ವಿಜಯ

ಆಂಧ್ರ ವಿಧಾನ ಪರಿಷತ್ತಿಗೆ ಜೂನ್ 24ರಂದು 31 ಸ್ಥಾನಗಳಿಗೆ ನಡೆದ ಉಪಚುನಾವಣೆಯಲ್ಲಿ ಕಮ್ಯೂನಿಸ್ಟ್ ಪಾರ್ಟಿ ಏಳು ಸ್ಥಾನಗಳಲ್ಲಿ ಸ್ಪರ್ಧಿಸಿದ್ದು, ಎಲ್ಲ ಸ್ಥಾನಗಳಲ್ಲೂ ವಿಜಯಗಳಿಸಿದೆ.

ಪಿ.ಸಿ. ಸೇನ್‌ರವರ ಮೇಲಿನ ಆರೋಪಕ್ಕೆ ರುಜುವಾತು

ಪಶ್ಚಿಮ ಬಂಗಾಳದ ಆಹಾರ ಸಚಿವ ಪಿ. ಸಿ. ಸೇನ್‌ರವರ ಮೇಲೆ, ಪಶ್ಚಿಮ ಬಂಗಾಳ ಮಂತ್ರಿ ಮಂಡಲದಿಂದ ರಾಜೀನಾಮೆ ಇತ್ತ ಸಿದ್ಧಾರ್ಥರೇಯವರು ಮಾಡಿದ್ದ ಆರೋಪಗಳು ದೃಢಗೊಳ್ಳುತ್ತಿವೆ.

ಆರೋಪಗಳನ್ನು ಪರಿಶೀಲಿಸಲು ಕಾಂಗ್ರೆಸ್ ಶಾಸನ ಸಭಾ ಪಕ್ಷದಿಂದ ಐದು ಮಂದಿಯನ್ನೊಳಗೊಂಡ ಸಮಿತಿಯು ಮಾಹಿತಿಗಳನ್ನು ಸಂಗ್ರಹಿಸಿದೆಯೆಂದು ತಿಳಿದುಬಂದಿದೆ. ಸಿದ್ಧಾರ್ಥರೇಯವರು ಮಾಡಿದ ಆರೋಪಗಳನ್ನು ಈ ಮಾಹಿತಿಗಳು ರುಜುವಾತು ಮಾಡಿವೆಯೆಂದೂ ತಿಳಿದು ಬಂದಿದೆ.

ಆಹಾರ ಸಚಿವರು ಆಹಾರ ಪದಾರ್ಥಗಳನ್ನು ವಶಪಡಿಸಿಕೊಳ್ಳುವ ಬಗ್ಗೆ ಸರಕಾರದ ತೀರ್ಮಾನವನ್ನು ಕಾರ್ಯಗತಗೊಳಿಸದೆ ಅಲಕ್ಷಿಸಿದರು ಎಂಬ ಆರೋಪವು ರುಜುವಾತಾಗಿದೆ. 1,58,000 ಟನ್ ಅಕ್ಕಿಯನ್ನು ರಾಜ್ಯದಲ್ಲಿ ವಶಪಡಿಸಿಕೊಂಡು ಬೆಲೆಯನ್ನು ನಿಗದಿ ಮಾಡಲು ಮತ್ತು ಅಕ್ಕಿ ಮಿಲ್‌ಗಳ ಮೇಲೆ ಶೇಕಡ 25 ಸುಂಕ ಹಾಕಲು ಸರಕಾರ ತೀರ್ಮಾನಿಸಿತ್ತು. ಆದರೆ ಅತಿ ಮುಖ್ಯವಾದ ನಾಲ್ಕು ತಿಂಗಳ ಅವಧಿಯಲ್ಲಿ ಸಚಿವರು ಅದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಲಿಲ್ಲ. ಇದರಿಂದಾಗಿ ಸರಕಾರದ ಅಕ್ಕಿ ದಾಸ್ತಾನು ವಶಪಡಿಸಿಕೊಳ್ಳುವ ಕಾರ್ಯ ಯಶಸ್ವಿಯಾಗಲಿಲ್ಲ. ಕೇವಲ 60,000 ಟನ್‌ಗಳು ಮಾತ್ರ ಪಡೆದುಕೊಳ್ಳಲು ಸಾಧ್ಯವಾಯಿತು. ಉಳಿದುವನ್ನು ದಾಸ್ತಾನುಗಾರರು ಮುಚ್ಚಿಡಲು ಸಾಧ್ಯವಾಯಿತು ಮತ್ತು ಅವರು 90ಲಕ್ಷ ರೂ ಲಾಭವನ್ನು ಇದರಿಂದ ಗಳಿಸಿದ್ದಾರೆ. ಇದೊಂದು ರುಜುವಾತೇ ಪಿ. ಸಿ. ಸೇನ್‌ರವರ ನಡತೆಯ ಬಗ್ಗೆ ಸಾಕು. ತನಿಖೆ ಮುಗಿದನಂತರ ಬಿ. ಸಿ. ರಾಯ್ ಏನು ಕ್ರಮತೆಗೆದುಕೊಳ್ಳುವರೆಂಬುದನ್ನು ಕಾದು ನೋಡಬೇಕಾಗಿದೆ.

ಪೂರ್ವ ಪಾಕೀಸ್ತಾನದಲ್ಲಿ ಗವರ್ನರರ ಆಳ್ವಿಕೆ

ಪೂರ್ವ ಪಾಕೀಸ್ಥಾನದಲ್ಲಿ ಪ್ರಜಾಪ್ರಭುತ್ವವೆಂಬುದು ಸಂಪೂರ್ಣವಾಗಿ ನಾಶವಾಗಿ, ಗವರ್ನರರ ಆಳ್ವಿಕೆ ಆರಂಭವಾಗಿದೆ. ಪಾಕೀಸ್ಥಾನದ ಅಸ್ತಿತ್ವದ ನಂತರದಲ್ಲಿ ಎಂಟು ಸರಕಾರಗಳು ಉರುಳಿದೆ. ಅವಾಮಿಲೀಗಿನ ಅತೂರ್ ರಹಮಾನ್ ಖಾನ್‌ರವರ ಸರಕಾರ ಉರುಳಿದಮೇಲೆ ಅಧಿಕಾರಕ್ಕೆ ಬಂದ ಅಬು ಹುಸ್ಸೇನ್ ಸರ್ಕಾರ್‌ರವರ ಸರಕಾರವು ಕೇವಲ ಮೂರು ದಿನಗಳು ಮಾತ್ರ ಅಧಿಕಾರದಲ್ಲಿದ್ದು ಉರುಳಿತು. ಯಾವ ಪಕ್ಷಕ್ಕೂ ಸರಿಯಾದ ಬಹುಮತವಿಲ್ಲದೆ ಇದ್ದುದರಿಂದಾಗಿ ಗವರ್ನರರ ಆಳ್ವಿಕೆ ಆರಂಭವಾಗಿದೆ. ಪೂರ್ವ ಪಾಕೀಸ್ತಾನದಲ್ಲಿನ ಈ ಘಟನೆಯಿಂದಾಗಿ ಕೇಂದ್ರ ಸರಕಾರವೂ ಸಹ ಉರುಳುವ ನಿರೀಕ್ಷೆಯಿದೆ. ಆರು ಪಕ್ಷಗಳ ಸಮ್ಮಿಶ್ರ ಸರಕಾರವಾಗಿರುವ ಕೇಂದ್ರ ಸರಕಾರದಿಂದ ಅವಾಮಿಲೀಗ್ ತನ್ನ ಬೆಂಬಲವನ್ನು ಹಿಂತೆಗೆದುಕೊಳ್ಳುವುದು ಖಂಡಿತವಾಗಿದೆ. ಅಮೇರಿಕದ ಯುದ್ಧಕೋರರೊಂದಿಗೆ ಕೂಡಿಕೊಂಡು ಜನತೆಗೆ ವಿರೋಧವಾಗಿ ಯುದ್ಧ ಪ್ರಚೋದಕ ನೀತಿ ಅನುಸರಿಸುತ್ತಿರುವ ಪಾಕೀಸ್ತಾನದ ರಾಜಕೀಯ ವಾತಾವರಣವು ಕಲುಷಿತಗೊಂಡಿರುವುದು ಇದರಿಂದ ವ್ಯಕ್ತವಾಗುತ್ತದೆ.

ಲೆಬನಾನ್ ಪರಿಸ್ಥಿತಿ

ಲೆಬನಾನ್‌ನಲ್ಲಿ ಅಧ್ಯಕ್ಷ ಚಮೋನ್‌ರವರ ಪಶ್ಚಿಮ ರಾಷ್ಟ್ರಗಳ ಪರವಾದ ನೀತಿಯ ವಿರುದ್ಧ ನಡೆಯುತ್ತಿರುವ ದಂಗೆಯು ಮುಂದುವರಿಯುತ್ತಿದೆ. ಬೈರೂತ್‌ನ ರಸ್ತೆಗಳಲ್ಲಿ ಜನರ ಪಡೆಗಳಿಗೂ ಸರಕಾರಿ ಪಡೆಗಳಿಗೂ ಸಮರ ನಡೆಯುತ್ತಿದೆ. ಆರು ವಾರಗಳಿಂದ ನಡೆಯುತ್ತಿರುವ ಈ ಕದನ ಮತ್ತು ಅದರಿಂದ ಏರ್ಪಟ್ಟಿರುವ ರಾಜಕೀಯ ಸಮಸ್ಯೆ ಇನ್ನೂ ಪರಿಹಾರವಾಗಿಲ್ಲ.

ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾಗ್ ಹ್ಯಾಮರ್ ಶೀಲ್ಡ್ ಲೆಬನಾನಿಗೆ ಭೇಟಿ ಇತ್ತಿದ್ದಾರೆ. ಭಾರತದ ಪ್ರತಿನಿಧಿ ರಾಜೇಶ್ವರ್ ದಯಾಳ್‌ರವರ ನೇತೃತ್ವದಲ್ಲಿ ವಿಶ್ವಸಂಸ್ಥೆಯ ವೀಕ್ಷಕರ ತಂಡವೊಂದು ಪರಿಸ್ಥಿತಿಯನ್ನು ಪರಿಶೀಲಿಸಲು ಲೆಬನಾನಿಗೆ ಭೇಟಿಯಿತ್ತಿದೆ. ಪರಿಸ್ಥಿತಿಯನ್ನು ಸುಧಾರಿಸಲು ಹ್ಯಾಮರ್ ಶೀಲ್ಡ್‌ರವರು ಈಜಿಪ್ಟಿನ ಅಧ್ಯಕ್ಷ ನಾಸೆರ್‌ರವರನ್ನು ಭೇಟಿ ಮಾಡಿದ್ದಾರೆ.

ಲೆಬನಾನಿನ ಪರಿಸ್ಥಿತಿಯನ್ನು ಬಳಸಿಕೊಂಡು ಅಮೆರಿಕಾ ಬ್ರಿಟನ್‌ಗಳು ತಮ್ಮ ಪಡೆಗಳನ್ನು ಕಳಿಸಲು ಯತ್ನಿಸುತ್ತಿವೆ. ವಿಶ್ವಸಂಸ್ಥೆಯ ಕಾರ್ಯದರ್ಶಿಯವರು ಪಶ್ಚಿಮರಾಷ್ಟ್ರ ಆ ರೀತಿ ಮಾಡಿದಲ್ಲಿ ಪರಿಸ್ಥಿತಿ ಹದಗೆಡುವುದು ಎಂಬ ಅಭಿಪ್ರಾಯಪಟ್ಟಿದ್ದಾರೆ.

(೨ನೇ ಪುಟದಿಂದ)

ಶ್ರಮಿಕ ವರ್ಗದ ಮುನ್ನಡೆ

(೮ನೇ ಪುಟದಿಂದ)

ಕೋಲಾರ—

ಕಾಂಗ್ರೆಸ್ ಹಾಗೂ ಕರ್ನಾಟಕ ಪ್ರಾಂತೀಯ ಸಮಿತಿಯ ನಿರ್ಣಯಗಳಂತೆ ಕೋಲಾರ ಜಿಲ್ಲಾ ಸಮಿತಿಯು, ಜಿಲ್ಲೆಯಲ್ಲಿ ಪಕ್ಷದ ಪುನರ್ಸಂಘಟನೆಗೆ ತೊಡಗಲು ನಿಶ್ಚಯಿಸಿತು.

ಭೂಸುಧಾರಣಾ ಕಾನೂನು

ಜೋಡಿ ಇನಾಮ್ ರದ್ದಿಯಾತಿ ಕಾನೂನು ಕೇವಲ ಕಾಗದದ ಮೇಲೆ ಮಾತ್ರ ಉಳಿದಿದ್ದು ಅದಕ್ಕೆ ವಿರೋಧಾರ್ಥವನ್ನು ಕಲ್ಪಿಸುತ್ತಿರುವುದನ್ನು, ಜೋಡಿ ಗ್ರಾಮಗಳಲ್ಲಿ ರೈತರಿಗೆ ಭೂಸ್ವಾಮ್ಯವನ್ನು ವಹಿಸಿಕೊಡುವುದನ್ನು ತಪ್ಪಿದ ಮೈಸೂರು ಸರಕಾರವನ್ನು ಕಟುವಾಗಿ ಟೀಕಿಸುವ ನಿರ್ಣಯವೊಂದು ಈ ಸಭೆಯಲ್ಲಿ ಅಂಗೀಕೃತವಾಯಿತು.

ಜತ್ತಿ ಸಮಿತಿಯ ವರದಿ

ಇನ್ನೊಂದು ಗೊತ್ತುವಳಿಯನ್ನು ಈ ಸಭೆಯು ಅಂಗೀಕರಿಸಿ ಮೈಸೂರು ಸರಕಾರವು ಪರಿಣಾಮಕಾರಿಯಾದ ಭೂಸುಧಾರಣೆಯನ್ನು ಜಾರಿಗೆ ತರುವಲ್ಲಿ ಸೋತಿರುವುದಕ್ಕಾಗಿ ವಿಷಾದಿಸಿದೆ. ಮುಖ್ಯ ಮಂತ್ರಿಗಳ ಇತ್ತೀಚಿನ ಹೇಳಿಕೆಗಳು ವಿರೋಧಾಭಾಸಗಳಿಂದ ಕೂಡಿದ್ದು, ಗೊಂದಲಮಯವಾಗಿದ್ದು ಜತ್ತಿ ಸಮಿತಿಯು ಹೇಳಿದ ಅತೃಪ್ತಿಕರ ಹಾಗೂ ಮೃದು ಸ್ವಭಾವದ ಭೂಸುಧಾರಣೆಗಳನ್ನು ಕೂಡ ಹಿಂದೆ ತಳ್ಳಲಾಗುತ್ತಿದೆಯೆಂದೂ ತಿಳುಹಿಸಿದೆ.

ಜಿಲ್ಲೆಯಲ್ಲಿರುವ ಕಷ್ಟದ ಹಾಗೂ ಗಂಭೀರ ಸ್ಥಿತಿಗತಿಯನ್ನು ಗಮನಿಸಿ ಪರಿಣಾಮಕಾರಿಯಾದ ಭೂಸುಧಾರಣೆಗಾಗಿ ಚಳವಳವನ್ನೇ ನಡೆಸಬೇಕೆಂದೂ ಸಭೆಯು ತೀರ್ಮಾನಿಸಿದೆ.

ಪೋಲೀಸ್ ಕಸ್ಟಡಿಗಳಲ್ಲಾದ ನಿಧನಗಳನ್ನು ಗಮನಿಸಿ, ಪೋಲೀಸ್ ಶಾಖೆಯ ಸಂಪೂರ್ಣ ಪರಿಷ್ಕರಣವೇ ನಡೆಯಬೇಕೆಂದೂ ಬಾಗೇಪಲ್ಲಿ ಮತ್ತು ಕೋಲಾರಗಳಲ್ಲಿ ರೈತರ ಹಾಗೂ ಕಾರ್ಮಿಕರ ಸಂಘಟನೆಗಳ ಬಗ್ಗೆ ಪೋಲೀಸರ ನಡುವಳಿಕೆಗಳು ಸರಿಯಾದುದಲ್ಲವೆಂದೂ ಹೇಳಲಾಯಿತು.

ಕೇರಳದಲ್ಲಿ ಸರಕಾರಿ ನೌಕರರ ಸಂಬಳದಲ್ಲಿ ಹೆಚ್ಚಳ

(ಮೊದಲನೇ ಪುಟದಿಂದ)

ದೆ. ಇದು ಬ್ರಿಟಿಷರ ಆಳ್ವಿಕೆಯ ಅವಶೇಷವಾಗಿದೆ. ಕಾಂಗ್ರೆಸ್ ಸರಕಾರ ಅದನ್ನೇ ಮುಂದುವರಿಸಿಕೊಂಡು ಬಂದಿದೆ ಸಮಾಜವಾದಕ್ಕೆ ವಿರೋಧವಾಗಿರುವ ಈ ಪದ್ಧತಿಯನ್ನು ಕೊನೆಗಾಣಿಸಿ, ಸಂಬಳದಲ್ಲಿರುವ ಅಂತರವನ್ನು ಕಡಿಮೆಮಾಡಲು (ಸಾಧ್ಯವಾದಷ್ಟು) ಕೇರಳ ಪ್ರಯತ್ನಿಸಿದೆ. ಮುಖ್ಯಮಂತ್ರಿ ನಂಬೂದ್ರಿಪಾದ್‌ರವರು ಹೇಳಿರುವಂತೆ ಯಾರಿಗೂ ರೂ. 1,000ಕ್ಕಿಂತ ಜಾಸ್ತಿ ಸಂಬಳವಿರಬಾರದೆಂಬುದನ್ನು ದೇಶಾದ್ಯಂತ ಜಾರಿಗೆ ತರುವುದಗತ್ಯ. ಮಂತ್ರಿಗಳೇ ಸಹಸ್ರಾರು ರೂಪಾಯಿ ಸಂಬಳ ತಿನ್ನುವಾಗ ಅಧಿಕಾರಿಗಳ ಸಂಬಳ ಕಡಿಮೆಮಾಡಲು ಹೇಗೆ ಸಾಧ್ಯ? ತಿಂಗಳಿಗೆ ರೂ 350 ಸಂಬಳದಲ್ಲಿ ದುಡಿಯುವ ಪ್ರಾಮಾಣಿಕ, ತ್ಯಾಗಶೀಲ ಕಮ್ಯೂನಿಸ್ಟ್ ಮಂತ್ರಿ ಮಂಡಲಕ್ಕೆ ಇದು ಸಾಧ್ಯವೇ ಹೊರತು ಕಾಂಗ್ರೆಸ್ಸಿಗರಿಗಲ್ಲ. ಉನ್ನತ ಅಧಿಕಾರಿಗಳ ಸಂಬಳಕ್ಕೆ ಕೇರಳವಂತೆ ಮಿತಿ ಹಾಕಬೇಕೆಂದು ಎಲ್ಲ ಪ್ರಜಾಪ್ರಭುತ್ವವಾದಿಗಳೂ ದೇಶಾದ್ಯಂತ ಒತ್ತಾಯ ತರಲು ಈಗ ಉತ್ತಮ ಅವಕಾಶ ದೊರೆತಿದೆ. ಕಾಂಗ್ರೆಸ್ಸಿಗರ ಸಮಾಜವಾದದ ಪರೀಕ್ಷೆ ನಡೆಯಲಿದೆ.

ನಮ್ಮ ಪ್ರಾಂತದ ಸರಕಾರಿ ನೌಕರರ ಪರಿಸ್ಥಿತಿ ಚಿಂತಾಜನಕವಾಗಿದೆ ಜನವರಿ, 1957ರಲ್ಲಿ ಹೊಸ ಸಂಬಳ ಸಾರಿಗೆಯನ್ನು ಮೈಸೂರು ಸರಕಾರ ಜಾರಿಗೆ ತಂದಿತ್ತು. ಅದರಿಂದ ಹಳೆ ಮೈಸೂರು ಭಾಗದವರಿಗೆ ಸ್ವಲ್ಪ ಅನುಕೂಲವಾಯಿತು. ಆದರೂ ಅದರ ಪ್ರಕಾರ ಕನಿಷ್ಟ ಸಂಬಳ ರೂ 30 ಮತ್ತು ತುಟ್ಟಿ ಭತ್ತೆ ರೂ 25, ಒಟ್ಟು ರೂ 55ಮಾತ್ರ. ಜವಾನರು ಮತ್ತಿತರರಿಗೆ ಇದಕ್ಕಿಂತಲೂ ಕಡಿಮೆ ಸಂಬಳವಿದೆ. ದೊಡ್ಡ ಶಹರಗಳಲ್ಲಿ ಮಾತ್ರ ತುಟ್ಟಿ ಭತ್ತೆ ರೂ 5ಜಾಸ್ತಿ ಬರುತ್ತದೆ. ಕೇರಳಕ್ಕಿಂತ ನಾವು ಎಷ್ಟು ಹಿಂದುಳಿದಿದ್ದೇವೆಂಬುದು ಇದರಿಂದ ವ್ಯಕ್ತವಾಗುತ್ತದೆ. ವರಿಷ್ಠ ಅಧಿಕಾರಿಗಳಿಗೆ ರೂ. 2,000ದಷ್ಟು ಸಹ ಇದೆ. ಇದ್ನು ಮುಂದಾದರೂ ಮೈಸೂರು ಸರಕಾರ ಯೋಗ್ಯರೀತಿಯಲ್ಲಿ ಕೇರಳದಂತೆ ಇಲ್ಲಿಯ ನೌಕರರ ಸಂಬಳ ಸಾರಿಗೆಯನ್ನು ಪುನರ್ವಿಮರ್ಶಿಸಿ ಧೈರ್ಯದ ಹೆಜ್ಜೆಯನ್ನಿಡುವುದೆಂದು ನಂಬುತ್ತೇವೆ.

ಕೇರಳ ಸರಕಾರದ ಈ ಹೊಸ ನಿರ್ಧಾರ ದೇಶಾದ್ಯಂತ ಪರಿಣಾಮವನ್ನುಂಟುಮಾಡಿದೆ. ಮೈಸೂರು, ಮದ್ರಾಸ್, ಮತ್ತು ಆಂಧ್ರ ಎನ್.ಜಿ.ಓ. ಸಂಘಗಳು ತಮ್ಮ ಸಂಬಳ ಹೆಚ್ಚಿಸಬೇಕೆಂದು ಒತ್ತಾಯಪಡಿಸಿವೆ. ಉತ್ತರ ಪ್ರದೇಶದ ಸರಕಾರೀ ನೌಕರರ ಸಂಘದವರು ಕೇರಳ ಸರಕಾರದ ಧೋರಣೆಯನ್ನು ಉತ್ಸಾಹದಿಂದ ಸ್ವಾಗತಿಸಿದ್ದಾರೆಂದು "ಹಿಂದುಸ್ಥಾನ್ ಟೈಂಸ್" ಪತ್ರಿಕೆ ವರದಿಮಾಡಿದೆ ಉತ್ತರ ಪ್ರದೇಶ ಅಸೆಂಬ್ಲಿಯ ಎಸ್ಟಿಮೇಟ್ಸ್ ಕಮಿಟಿಯ ಅಧ್ಯಕ್ಷರೂ ಕಾಂಗ್ರೆಸ್ ಅಸೆಂಬ್ಲಿ ಪಕ್ಷದ ಕಾರ್ಯದರ್ಶಿಯೂ ಆದ ಶ್ರೀ ನವಲ್ ಕಿಶೋರ್ ಅವರು ಕೇರಳ ಸರಕಾರ ಅನುಸರಿಸಿದ ತತ್ವವನ್ನು ಸ್ವಾಗತಿಸಿ ಮತ್ತು ಅದರ ಬಗ್ಗೆ ಕೇಂದ್ರ ಸರಕಾರ ಮಾರ್ಗದರ್ಶನ ನೀಡಬೇಕೆಂದು ಅಭಿಪ್ರಾಯಪಟ್ಟಿದ್ದಾರೆಂದು ವರದಿಯಾಗಿದೆ.

ಅಧಿಕ ಸಂಬಳ ಪಡೆಯುವ ಐ. ಎ. ಎಸ್. ಅಧಿಕಾರಿಗಳ ಪ್ರಶ್ನೆಯೊಂದಿದೆ. ಅವರಿಗೆ ಬರುವ ಸಂಬಳದಲ್ಲಿ ಕಡಿಮೆಮಾಡಲು ರಾಜ್ಯ ಸರಕಾರಗಳಿಗೆ ಅಧಿಕಾರವಿಲ್ಲ. ಈ ವಿಷಯದಲ್ಲಿ ಕೇಂದ್ರ ಸರಕಾರದ ಮೇಲೆ ಒತ್ತಾಯ ತರುವುದಗತ್ಯ.

ಆಡಳಿತೆಯ ಬೆನ್ನೆಲುಬುಗಳಾದ ಸರಕಾರಿ ನೌಕರರು ತೃಪ್ತಿಯಾಗಿದ್ದರೆ ಮಾತ್ರ ರಾಜ್ಯದ ಆಡಳಿತೆ ದಕ್ಷವಾಗಿಯೂ ಶುದ್ಧವಾಗಿಯೂ ನಡೆಯುವುದು. ಹೊಸ ಸಂಬಳ ಸಾರಿಗೆಯನ್ನು ಘೋಷಿಸುತ್ತಾ ಕೇರಳದ ಹಣಕಾಸಿನ ಮಂತ್ರಿ ಅಚ್ಯುತ್ ಮೆನನ್‌ರವರು ಕೇರಳ ರಾಜ್ಯದ ನೌಕರರು ಇದರಿಂದ ಸಮಾಧಾನಹೊಂದಿ ಉತ್ತಮ ರೀತಿಯಲ್ಲಿ ಸೇವೆಮಾಡಲು ಕರೆಯಿತ್ತಿದ್ದಾರೆ. ಅದಕ್ಕೆಲ್ಲರೂ ಬೆಂಬಲ ನೀಡುವುದು ಖಂಡಿತ.

ಕೇರಳದ ಈ ಹೆಜ್ಜೆ ಕಾಂಗ್ರೆಸ್ಸಿಗೊಂದು ಸವಾಲಾಗಿದೆ. ಅದರಲ್ಲಿ ಅಡಗಿರುವ ಮೂಲ ತತ್ವಗಳನ್ನು ಇತರ ರಾಜ್ಯಗಳಲ್ಲೂ ಕೇಂದ್ರದಲ್ಲೂ ಕಾಂಗ್ರೆಸ್ ಕೂಡಲೇ ಜಾರಿಗೊಳಿಸಬೇಕೆಂದೂ ಎಲ್ಲ ಸಮಾಜವಾದಿಗಳೂ, ಪ್ರಜಾಸತ್ತಾವಾದಿಗಳೂ ಒತ್ತಾಯ ತರಬೇಕೆಂದು ವಿನಂತಿಸುತ್ತೇವೆ. ಅದೇ ಸಂದರ್ಭದಲ್ಲಿ ನವ ಸಮಾಜ ನಿರ್ಮಾಣದ ದಾರಿಯಲ್ಲಿ ಹೆಜ್ಜೆಯನ್ನಿಟ್ಟು ಮುಂದುವರಿಯುವ ಕೇರಳದ ಕಮ್ಯೂನಿಸ್ಟ್ ಸರಕಾರಕ್ಕೆ ನಾವು ಅಭಿನಂದಿಸುತ್ತೇವೆ.

ನೀವೇನು ಹೇಳುತ್ತೀರಿ ?

(೫ನೇ ಪುಟ ನೋಡಿ)

ಷ್ಟಸಾಧ್ಯ ಕೆಲಸದಿಂದ ಹಾಗೂ ನಿಷ್ಠೆಯಿಂದ ದುಡಿದು 'ಬಾಂಬೆ ಸಮಾಚಾರ್' ಪತ್ರಿಕೆಯಲ್ಲಿ ಒಂದು ಉನ್ನತ ಸ್ಥಾನವನ್ನು ಪಡೆದರು. 1935ರಲ್ಲಿ "ಬಾಂಬೆ ಸಮಾಚಾರ್" ಪತ್ರಿಕೆಯ ಸಹಸಂಪಾದಕರಾದರು.

ಅಂಕ್ಲೇಸರಿಯಾ, ಬರೋಚ್ ಮತ್ತು ಬರೋಡಾಗಳಲ್ಲಿ ಶಿಕ್ಷಣ ಪಡೆದರು.

ಆದರೆ ವರದಿಯಾಗದಿದ್ದ ವಿಷಯ ಹೀಗಿತ್ತು

ಶ್ರೀ ಅಂಕ್ಲೇಸರಿಯಾ ಅವರು ಪತ್ರಿಕಾ ಕಛೇರಿಯಲ್ಲಿ ತಮ್ಮ ಕುರ್ಚಿಯ ಮೇಲೆ ಕೆಲಸ ಮಾಡುತ್ತ ಕುಳಿತಿರುವಂತೆಯೇ ಸತ್ತರು.

ಅಲ್ಲಿಯೇ ಒಂದಿಷ್ಟು ಔಷಧಿ ಕುಡಿಯಲು ಪ್ರಯತ್ನಪಟ್ಟರು. ಆದರೆ ಔಷಧಿ ಬಾಯಿಂದ ವಾಂತಿಯಾಗಿ ಮೇಜಿನ ಮೇಲೆ ಬಿತ್ತು. ಸುತ್ತಲಿದ್ದವರು ಅವರ ತಲೆ ಮೇಜಿನ ಮೇಲೆ ಬೀಳುತ್ತಿರುವುದ್ನು ಕಂಡರು. ಮುಂದೆ ಎರಡು ನಿಮಿಷಗಳಲ್ಲೇ ಅವರು ಸತ್ತಿರಬೇಕು.

ಡಾಕ್ಟರುಗಳನ್ನು ಕರೆಸಲಾಯಿತು. ಸ್ವಾಭಾವಿಕವಾಗಿಯೇ ಸತ್ತಿದ್ದಾರೆ ಎಂದು ಅವರು ಸರ್ಟಿಫಿಕೇಟ್ ಕೊಟ್ಟರು.

"ಶ್ರೀ ನಂಬೂದಿರಿಪಾದರಂತಹರು ಬೇಕು"

"ಕಮ್ಯೂನಿಸ್ಟರು ನನ್ನ ಮೊದಲನೆಯ ನಂಬರ್ ಶತ್ರುಗಳು" ಎಂದು ದೇಶದಲ್ಲಿ ಯಾವ ಕಮ್ಯೂನಿಸ್ಟ್ ವಿರೋಧಿಯೂ ಈವರೆಗೂ ಹೇಳಿರದಂಥ ದರ್ಪದಲ್ಲಿ ಮಾತನಾಡಿದ್ದ ಭಾರತದ ರಾಜಕಾರಣಿ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿ ಅವರು ಕೇರಳದ ಕಮ್ಯೂನಿಸ್ಟ್ ಸಚಿವ ಇ. ಎಂ. ಎಸ್. ನಂಬೂದಿರಿಪಾದ್ ಅವರನ್ನು ಮುಕ್ತ ಕಂಠದಿಂದ ಪ್ರಶಂಸಿದರು.

ಸ್ವಾರ್ಕ್ ಹೋಂ ಕಾಂಗ್ರೆಸ್ಸಿಗೆ ಬೆಂಬಲವಾಗಿ ಮದರಾಸಿನಲ್ಲಿ ಸೇರಿದ್ದ ಸಭೆಯಲ್ಲಿ ಶ್ರೀ ರಾಜಾಜಿಯವರು ಈ ಕೂಟ ತಮಗೆ ಮಹತ್ಸಂತೋಷ ತಂದಿದೆಯೆಂದೂ ಹೇಳಿದರು.

ಸಫಲ ನಿರೀಕ್ಷೆ

ಶ್ರೀ ರಾಜಗೋಪಾಲಾಚಾರಿಯವರು ಮಾತನಾಡುತ್ತ "ನಂಬೂದಿರಿಪಾದರ ಪರಿಚಯ ನನಗೆ ಚೆನ್ನಾಗಿದೆ. ಅವರೂ ನಾನೂ ಒಟ್ಟಿಗೇ ಸೆರೆಮನೆಯಲ್ಲಿದ್ದೆವು. ಅವರ ನಡತೆ, ವರ್ತನೆ ನನ್ನನ್ನು ಮೆಚ್ಚಿಸಿದವು. ಅವರಿಂದ ನಾನು ತುಂಬಾ ನಿರೀಕ್ಷಿಸಿದ್ದೆ. ಅದರಲ್ಲಿ ಬಹುಭಾಗ ಈಗ ಸಫಲವಾಗಿದೆ" ಎಂದರು.

ಯಾವ ಪಂಥವಾದರೇನು ?

"ಯಾವ ಪಂಥದವರಾದರೇನು? ದೇಶಕ್ಕೆ ಸಚ್ಚಾರಿತ್ರ್ಯಶೀಲರಾದ ಜನರು ಬೇಕು. ಅಂಥ ಸಚ್ಚಾರೀತ್ರ್ಯ ಶೀಲರಲ್ಲಿ ಶ್ರೀ ನಂಬೂದಿರಿಪಾದರೊಬ್ಬರು. ಇಂಥವರು ವಿರೋಧಪಕ್ಷದಲ್ಲಿದ್ದರೂ ಸರಕಾರದ ನಾಯಕರಿಗಿಂತ ಹೆಚ್ಚು ಪ್ರಬಲರು"

ಎಂದು ಶ್ರೀ ರಾಜಾಜಿಯವರು ನಂಬೂದಿರಿಪಾದ್‌ರವರನ್ನು ಪ್ರಶಂಸಿದರು.

REG. No. M 6867

Edited Printed and Published by C. R. Krishna Rao, at Janashakthi Printers
L—59. K. V. Temple St., Sultanpet Bangalore—2 phone 3810